ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಮುಖಪತ್ರಿಕೆ

ಸಂಪುಟ 8 ಸಂಚಿಕೆ 37 ಸೆಪ್ಟಂಬರ್ 14, 1986 ಬೆಲೆ 80 ಪೈಸೆ.

ಒಳಗೇನಿದೆ?....

ದೇಶದ ಭದ್ರತೆಗೆ ಅಪಾಯಕಾರಿಯಾದ

ಗೂರ್ಖಾ ಲ್ಯಾಂಡ್ ಬೇಡಿಕೆಯನ್ನು ಎದುರಿಸಿರಿ

ಪಶ್ಚಿಮ ಬಂಗಾಲದ ಉತ್ತರ ಜಿಲ್ಲೆಗಳಲ್ಲಿ ಪ್ರತ್ಯೇಕ ಗೂರ್ಖಾ ರಾಜ್ಯ ಸ್ಥಾಪನೆಯ ಬೇಡಿಕೆಗಾಗಿ ಮುಂದುವರಿಯುತ್ತಿರುವ ಚಳುವಳಿ ಕುರಿತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ತನ್ನ ಗಂಭೀರ ಚಿಂತನೆ ವ್ಯಕ್ತ ಮಾಡುತ್ತದೆ. ದೇಶವನ್ನು ನಿಶ್ಯಕ್ತಗೊಳಿಸುವ ಒಳಸಂಚಿನಲ್ಲಿ ಈ ಚಳುವಳಿಯ ಸಂಬಂಧ ಇದಕ್ಕಿದೆ. ಈ ಆಹ್ವಾನವನ್ನು ಗಂಭೀರವಾಗಿ ಎದುರಿಸದಿದ್ದರೆ, ಪಂಜಾಬಿನಂತ ಪರಿಸ್ಥಿತಿಯೇ ಪುನರಾವರ್ತಿಯಾಗಬಹುದಾಗಿದೆ.

ಈ ಚಳುವಳಿಯ ಮುಖಂಡ ತನ್ನ ರಾಷ್ಟ್ರವಿರೋಧಿ ಉದ್ದೇಶವನ್ನಾಗಲಿ ಚಳುವಳಿಯನ್ನಾಗಲೀ ಮುಚ್ಚಿಟ್ಟಿಲ್ಲ. ಆತ ಭಾರತ ದೇಶದ ವಿರುದ್ಧ ನೇಪಾಲ, ಪಾಕಿಸ್ತಾನ, ಅಮೇರಿಕ, ಇಂಗ್ಲೆಂಡ್ ಹಾಗೆಯೇ ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಮನವಿ ಮಾಡಿಕೊಂಡಿದ್ದಾನೆ. ಘಿಸಿಂಗ್‌ನಂತಹ ದೇಶ ಘಾತುಕ ನಿಲುವೆಯನ್ನು ತಾಳಿದ್ದಿಲ್ಲ. ಎಲ್ಲರಿಗೂ ಗೊತ್ತಿದ್ದಂತ ಮೂಲೆಗಳಿಂದ ಈತನಿಗೆ ವಿಪುಲ ಹಣ ಒದಗಿಸಲಾಗುತ್ತಿದೆ. ಈ ಚಳುವಳಿಯಲ್ಲಿ ಯಾರು ವಿದೇಶೀ ಸಹಾಯದಿಂದ ಭಾರತದ ಸಮಗ್ರತೆಯ ಮೇಲೆ ನಡೆದಿರುವ ಆಕ್ರಮಣವೆಂದು ತಿಳಿಯುವುದಿಲ್ಲವೋ ಅವರು ವಾಸ್ತವ ಪರಿಸ್ಥಿತಿಗೆ ಕುರುಡಾಗಿದ್ದಾರೆ ಅಥವಾ ಬುದ್ಧಿಪೂರ್ವಕ ಜನರನ್ನು ಮೋಸಗೊಳಿಸುತ್ತಿದ್ದಾರೆಂದು ಹೇಳಬೇಕಾಗಿದೆ.

ಪ್ರತ್ಯೇಕ ಗೂರ್ಖಾ ರಾಜ್ಯಕ್ಕಾಗಿ ನಡೆದಿರುವ ಚಳುವಳಿ ರಾಷ್ಟ್ರ ವಿರೋಧಿಯಾಗಿದೆಂದು ತಿಳಿಯುವುದು ಸರಿಯಲ್ಲವೆಂದು ಕಾಂಗ್ರೆ ಉಪಾಧ್ಯಕ್ಷ ಅರ್ಜುನ್ ಸಿಂಗ್ ಹೇಳಿರುವುದು ಆಶ್ಚರ್ಯಕರವಾಗಿದೆ, ಅದರ ಕುರಿತು ಪಿ. ಬಿ. ತನ್ನ ತಿರಸ್ಕಾರ ವ್ಯಕ್ತಮಾಡುತ್ತದೆ. ಪಂಜಾಬಿನ ರಾಜ್ಯಪಾಲರಾದ ಸಿದ್ಧಾರ್ಥ ಶಂಕರರೇ ಅವರೂ ಕೂಡ ಅದೇ ರೀತಿಯ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಪಂಜಾಬಿನಲ್ಲಿ ಚಳುವಳಿ ನಡೆಯುತ್ತಿದ್ದಾಗ ಪ್ರಾರಂಭದ ದಿವಸಗಳಲ್ಲಿ ಒಂದು ಹೆಜ್ಜೆಗಳನಿಟ್ಟು ಬಿಂದ್ರನ್‌ವಾಲೆಗೆ ಬೆಂಬಲ ನೀಡುವಂತ ಕಾಂಗ್ರೆಯ ಪ್ರಯತ್ನವನ್ನು ಇದು ನೆನಪಿಗೆ ತಂದುಕೊಡುತ್ತದೆ. ಪ್ರತ್ಯೇಕ ಗೂರ್ಖಾ ರಾಜ್ಯಕ್ಕಾಗಿ ನಡೆದಿರುವ ಚಳುವಳಿಯ ಪ್ರತ್ಯೇಕತೆಯ ಅಂಶವನ್ನು ಈ ರೀತಿಯ ಮುಖವಾಡದಿಂದ ಮುಚ್ಚುತ್ತಿರುವುದರ ಅಪಾಯದ ಕುರಿತು ಜನತೆಯನ್ನು ಪಿ. ಬಿ. ಎಚ್ಚರಿಸುತ್ತದೆ.

ಪಶ್ಚಿಮ ಬಂಗಾಲಕ್ಕೆ ಲಗತ್ತಿರುವ ಮತ್ತು ಡಾರ್ಜಿಲಿಂಗ್ ಜಿಲ್ಲೆಯ ನೇಪಾಲಿ ಮಾತಾಡುವ ಜನರ ಪ್ರಜಾಪ್ರಭುತ್ವ ಬೇಡಿಕೆಗಳನ್ನು ಕುರಿತು ಸಿ. ಪಿ. ಐ. (ಎಂ) ಮತ್ತು ಪಶ್ಚಿಮ ಬಂಗಾಲದ ಹಾಗೆಯೇ ದೇಶದ ಇತರ ಭಾಗಗಳ ಎಡ ಪಕ್ಷಗಳು ಯಾವಾಗಲು ಬೆಂಬಲಿಸುತ್ತ ಬಂದಿವೆ. ನೇಪಾಲಿ

(8ನೇ ಪುಟ ನೋಡಿ)

ಅಮಾನುಷ ದಬ್ಬಾಳಿಕೆಯನ್ನೆದುರಿಸಿ

ಕೇರಳದಲ್ಲಿ ಯುವಕರ ಚರಿತ್ರಾರ್ಹ ಹೋರಾಟ

ಕೇರಳದಲ್ಲಿ 35 ದಿವಸ ದೀರ್ಘಕಾಲ ಡಿ. ವೈ ಎಫ್. ಐ. ನೇತೃತ್ವದಲ್ಲಿ ನಡೆದ ಯುವಕರ ಹೋರಾಟ ಸ್ವಾತಂತ್ರ್ಯ ನಂತರದಲ್ಲಿ ಅತ್ಯಂತ ಪರಿಣಾಮಕಾರಿಯಾದ ಅತಿ ದೀರ್ಘ ಹೋರಾಟವಾಗಿದೆಯೆಂದು ಅಖಿಲ ಭಾರತ ಡಿ. ವೈ ಎಫ್. ಐ ಯ ಪ. ಕಾರ್ಯದರ್ಶಿಯೂ, ಲೋಕಸಭಾ ಸದಸ್ಯರೂ ಆದ ಹನನ್ ಮುಲ್ಲಾ ಐಕ್ಯರಂಗದ ವ್ಯವಸ್ಥಾಪಕ ಸಂಪಾದಕರು ಬೆಂಗಳೂರಿನಲ್ಲಿ ಮಂಗಳವಾರ ಅವರನ್ನು ಸಂದರ್ಶಿಸಿದಾಗ ಅಭಿಮಾನದಿಂದ ತಮ್ಮ ಅಭಿಪ್ರಾಯ ವ್ಯಕ್ತಮಾಡಿದರು. ಅವರು ಕೇರಳದಲ್ಲಿ ಗೋಳಿಬಾರಿನಿಂದ ಗಾಯಗೊಂಡ ಬಾಲಕೃಷ್ಣನ್ ಅವರನ್ನು ಮಣಿಪಾಲದ ಆಸ್ಪತ್ರೆಯಲ್ಲಿ ಸಂದರ್ಶಿಸಿ ಇಲ್ಲಿಗೆ ಬಂದಿದ್ದರು. ಗೋಳೀಬಾರ್, ಲಾಠಿ ಚಾರ್ಜ್, ಅಮಾನುಷ ಹೊಡೆತ–ಬಡಿತಗಳಂಥ ರಾಕ್ಷಸೀ ದಬ್ಬಾಳಿಕೆಯನ್ನೆದುರಿಸಿ ನಡೆಸಿದ ಸುದೀರ್ಘ ಚಳುವಳಿ, ಮುಖ್ಯಮಂತ್ರಿ ದಿಲ್ಲಿ ಸಂದರ್ಶಿಸಿದಾಗ ಅಲ್ಲಿ ಡಿ. ವೈ. ಎಫ್. ಐ. ಕಾರ್ಯಕರ್ತರು ಪರಿಣಾಮಕಾರಿಯಾಗಿ ನಡೆಸಿದ ಘೇರಾವೋ ಮುಖ್ಯಮಂತ್ರಿಯವರಲ್ಲಿ ಭೀತಿಯನ್ನುಂಟು ಮಾಡಿ ಕೊನೆಯಲ್ಲಿ ತನ್ನ ಮಧ್ಯಸ್ತಿಕೆಯಿಂದ ಕರುಣಾಕರನ್ ಒಪ್ಪಂದಕ್ಕೆ ಬರುವಂತಾಯಿತೆಂದು ಹೇಳಿದರು. ಭಾರತದ ಸಂವಿಧಾನದಲ್ಲಿಯ ನೀತಿ ನಿರೂಪಣೆಯಂತೆ ಪ್ರತಿಯೊಬ್ಬ ನಾಗರೀಕನಿಗೆ ಉತ್ತಮ ಜೀವನ ಒದಗಿಸಬೇಕೆಂದೂ ಅದಕ್ಕಾಗಿ ಕೆಲಸ ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಸೇರಿಸಬೇಕೆಂದೂ ದೇಶದಲ್ಲಿಯ ಪ್ರಜಾಪ್ರಭುತ್ವ ಚಳುವಳಿಯ ಒಂದು ಮುಖ್ಯ ಬೇಡಿಕೆಯಾಗಿದೆ. ಎಲ್ಲರಿಗೂ ಉದ್ಯೋಗ ಒದಗಿಸುವ ತನಕ ಅವರಿಗೆಲ್ಲ ನಿರುದ್ಯೋಗ ಭತ್ಯೆ ಕೊಡಬೇಕಾಗಿರುವುದು ಸರ್ಕಾರದ ಆದ್ಯ ಕರ್ತವ್ಯ.

ಇ.ಕೆ. ನಯನಾರ್ ಮುಖ್ಯಮಂತ್ರಿಯಾಗಿದ್ದ ಸಿ.ಪಿ.ಐ. (ಎಂ) ಮುಖಂಡತ್ವದ ಕೇರಳದ ಎಡ ಮತ್ತು ಪ್ರಜಾಪ್ರಭುತ್ವ ಸರಕಾರ ಸಂವಿಧಾನದ ಈ ನಿರೂಪಣೆಯನ್ನು ಕಾರ್ಯರೂಪದಲ್ಲಿ ತಂದಿತ್ತು. ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ನೀಡುವ ಕ್ರಮ ಪ್ರಾರಂಭಿಸಿತ್ತು. ಅದರಿಂದಾಗಿ ಸಾಧಾರಣ 2 ಲಕ್ಷ ನಿರುದ್ಯೋಗಿಗಳಿಗೆ ಲಾಭವಾಗಿತ್ತು.

ಆದರೆ ಭ್ರಷ್ಟ ಕರುಣಾಕರನ್ ಸರಕಾರ ಈ ಯೋಜನೆಯನ್ನು ವಿಸ್ತರಿಸುವ ಬದಲಾಗಿ ಅದನ್ನು ನಿಲ್ಲಿಸಿತ್ತು. ಲೋಕ ಸೇವಾ ಆಯೋಗ ಮತ್ತು ಉದ್ಯೋಗ ವಿನಿಮಯ ಕೇಂದ್ರದ ಮೂಲಕ ನೌಕರಿ ಕೊಡಿಸುವುದರ ಬದಲಾಗಿ, ಅವರನ್ನೆಲ್ಲ ಕಡೆಗಣಿಸಿ ಮನ ಬಂದಂತೆ ಸರ್ಕಾರಿ ನೌಕರಿ ಕೊಡಿಸುವುದು ನಡೆಯಿತು. ಅದರಿಂದಾಗಿ ಕೇರಳದ 25ಲಕ್ಷ ನಿರುದ್ಯೋಗಿಗಳು ಲಂಚ, ರಾಜಕೀಯ ವ್ಯಕ್ತಿಗಳ ಪ್ರಭಾವವನ್ನು ಆಶ್ರಯಿಸ ಬೇಕಾಯಿತು.

(8ನೇ ಪುಟ ನೋಡಿ)

ನಿಕಾರಾಗುವ ಅಧ್ಯಕ್ಷರಿಗೆ ಅಭೂತಪೂರ್ವ ಸ್ವಾಗತ

ಅಮೇರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ದಿಟ್ಟ ಹೋರಾಟ ನಡೆಸುತ್ತಿರುವ ನಿಕಾರಾಗುವ ದೇಶದ ಅಧ್ಯಕ್ಷರಾದ ಡೇನಿಯಲ್ ಓರ್ಟೆಗಾ ಅವರು ತಮ್ಮ ಪತ್ನಿ ಜೊತೆಯಲ್ಲಿ ತಾ. 8ರಂದು ಬೆಂಗಳೂರಿಗೆ ಆಗಮಿಸಿದಾಗ ಭವ್ಯ ಸ್ವಾಗತ ನೀಡಲಾಯಿತು. ಅವರು ವಿಮಾನದಿಂದ ಇಳಿಯುತ್ತಿದ್ದಂತೆಯೇ ಸಿ.ಪಿ.ಐ. (ಎಂ) ಪರವಾಗಿ ಎಸ್. ಸೂರ್ಯನಾರಾಯಣರಾವ್ ಸಿ.ಐ.ಟಿ.ಯು. ಪರವಾಗಿ ಎ. ಕೆ. ಉಪಾಧ್ಯಾಯರವರು ಓರ್ಟೆಗಾರವರಿಗೆ ಹೂಮಾಲೆ ಅರ್ಪಿಸಿದರು. ಸಿ. ಪಿ. ಐ. (ಎಂ) ಸಿ. ಐ. ಟಿ. ಯು., ವಿದ್ಯಾರ್ಥಿ ಯುವಜನ ಫೆಡರೇಶನ್‌ನ ನೂರಾರು ಜನ ಕೆಂಬಾವುಟ, ಬ್ಯಾನರ್‌ಗಳೊಂದಿಗೆ "ಅಮೇರಿಕನ್ ಸಾಮ್ರಾಜ್ಯಶಾಹಿಗೆ ಧಿಕ್ಕಾರ" "ಭಾರತ–ನಿಕಾರಾಗುವ ಜನತೆಯ ಐಕ್ಯತೆ ಚಿರಾಯುವಾಗಲಿ" "ಡೇನಿಯಲ್ ಓರ್ಟೆಗಾ ಜಿಂದಾಬಾದ್" ಘೋಷಣೆಗಳೊಂದಿಗೆ ಅವರನ್ನು ಸ್ವಾಗತಿಸಿದರು. ಅವರನ್ನು ಸ್ವಾಗತಿಸಿ ನಗರದಲ್ಲೆಲ್ಲಾ ಪೋಸ್ಟರ್ ಅಂಟಿಸಲಾಗಿತ್ತು.

ಹಂಚಿನ ಕಾರ್ಮಿಕರ ರಾಜ್ಯ ಸಮಾವೇಶ

ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನಿನ ವಾರ್ಷಿಕ ಮಹಾಸಭೆ ಆಗಸ್ಟ್ 31 ರಂದು ಬೋಳಾರದಲ್ಲಿ ನಡೆಯಿತು. ಕೆ. ಆರ್. ಶ್ರೀಯಾನ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಘದ ಪ್ರ. ಕಾರ್ಯದರ್ಶಿ ಗತ ವರ್ಷದ ವರದಿಯನ್ನು ಮಂಡಿಸುತ್ತಾ ಹಂಚಿನ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದ್ದರು. ಹಂಚಿನ ಕಾರ್ಮಿಕರಿಗೆ ಏರಿಳಿತ ತುಟ್ಟಿಭತ್ತೆ ಸಹಿತ ಕನಿಷ್ಠ ಕೂಲಿ ನಿಗದಿ ಮಾಡುವಂತೆ ಸರ್ಕಾರವನ್ನು ಒತ್ತಾಯಿಸುವ ಸಲುವಾಗಿ ರಾಜ್ಯ ಮಟ್ಟದ ಹಂಚಿನ ಕಾರ್ಮಿಕರ ಸಮಾವೇಶ ನಡೆಸಬೇಕೆಂದು ಸಭೆ ನಿರ್ಣಯ ಕೈಗೊಂಡಿತು.

ಸಭೆಯಲ್ಲಿ ದೇಶದ ಐಕ್ಯತೆಯ ಬಗ್ಗೆ ವಿಶ್ವ ಶಾಂತಿಯ ಬಗ್ಗೆ, ಸಾಮ್ರಾಜ್ಯಶಾಹಿಗಳ ಯುದ್ಧಕೋರ ನೀತಿಯ ವಿರುದ್ಧ, ನಿರ್ಣಯಗಳನ್ನು ಕೈಗೊಳ್ಳಲಾಯಿತು.

ತಮ್ಮ ಹಕ್ಕಿಗಾಗಿ ಕಳೆದ 5 ತಿಂಗಳಿಂದ ಹೋರಾಟ ನಡೆಸುತ್ತಿರುವ ಕಾಮನ್ ವೆಲ್ತ್ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡುವ ನಿರ್ಣಯವನ್ನು ಮಂಜೂರು ಮಾಡಿ ಸರ್ಕಾರ ಕೂಡಲೇ ಈ ಕಾರ್ಮಿಕರ ಹೇಳಿಕೆಯನ್ನು ಇತ್ಯರ್ಥಪಡಿಸಬೇಕೆಂದು ಒತ್ತಾಯಿಸಿತು.

ಸೆಪ್ಟೆಂಬರ್ 29 ರಂದು ಬೆಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ರೈತರ ಜಾಥಾಗೆ ಸಭೆ ಬೆಂಬಲ ಸೂಚಿಸಿ ಠರಾವು ಅಂಗೀಕರಿಸಿತು.

ಮುಂದಿನ ವರ್ಷಕ್ಕೆ ಕಾ. ಅಬ್ರಹಾಂ ಕರ್ಕಡರು ಅಧ್ಯಕ್ಷರಾಗಿಯೂ, ಕಾ. ಗಂಗಾಧರ ಶೆಟ್ಟಿ, ಕಾ ಬಿ. ಮಾಧವ ಹಾಗೂ ಕಾ ಡಿ. ಗೋಪಾಲ ಉಪಾಧ್ಯಕ್ಷರಾಗಿಯೂ, ಕಾ. ಕೆ ಮೂಸಬ್ಬ ಪ್ರಧಾನ ಕಾರ್ಯದರ್ಶಿಯಾಗಿಯೂ, ಕಾ. ಶಿವಾನಂದ ಕೋಟ, ಕೆ. ಶಂಕರ್ ಜೊತೆ ಕಾರ್ಯದರ್ಶಿಯಾಗಿ, ಕಾ ಸಿ. ನಾರಾಯಣ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ. ○

'ವಿಧಾನ ಸೌಧ ಚಲೋ' ಯಶಸ್ವಿಗೊಳಿಸಲು

ದ. ಕ. ಜಿಲ್ಲಾ ರೈತ ಸಂಘದ ಕರೆ

ಕಳೆದ ಒಂದು ವರ್ಷದಿಂದ ರಾಜ್ಯದ ರೈತರ 10 ಪ್ರಮುಖ ಬೇಡಿಕೆಗಳ ಬಗ್ಗೆ ಸಭೆ, ಸಮ್ಮೇಳನ ಮನವಿ, ಮತ ಪ್ರದರ್ಶನಗಳ ಮೂಲಕ ರಾಜ್ಯ ಸರಕಾರವನ್ನು ಹಲವಾರು ಹಂತಗಳಲ್ಲಿ ಪ್ರಾಂತ ರೈತ ಸಂಘವು ನಿರಂತರವಾಗಿ ಒತ್ತಾಯಿಸುತ್ತಾ ಬಂದಿದ್ದರೂ, ಸರಕಾರ ಏನನ್ನೂ ಮಾಡಿಲ್ಲ ಅಲ್ಲದೆ ಯಾವುದೇ ಉತ್ತರ ನೀಡದೆ ಸುಮ್ಮನೆ ಕುಳಿತಿದೆ. ಆದುದರಿಂದ ಸರಕಾರದ ಗಮನವನ್ನು ಸೆಳೆಯಲು 29-9-86 ರಂದು ರಾಜ್ಯಾದ್ಯಂತ ರೈತರು ಬೆಂಗಳೂರಿಗೆ ಬಂದು ಸೇರಲಿದ್ದಾರೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಎಲ್ಲಾ ತಾಲೂಕುಗಳಿಂದ ರೈತರು ಬೃಹತ್ ಸಂಖ್ಯೆಯಲ್ಲಿ ಬೆಂಗಳೂರಿಗೆ ವಿಧಾನ ಸೌಧದೆದುರು ಬಂದು ಸೇರಲು 2-9-86 ರಂದು ಮಂಗಳೂರಿನಲ್ಲಿ ಸೇರಿದ ದ. ಕ. ಜಿಲ್ಲಾ ರೈತ ಸಂಘದ ಕಾರ್ಯಕಾರೀ ಸಮಿತಿಯು ಜಿಲ್ಲೆಯ ರೈತರನ್ನು ಮುಂಬರುವ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ಎಲ್ಲಾ ತಾಲೂಕುಗಳಲ್ಲೂ ರೈತ ಕಾರ್ಯಕರ್ತರು ಸ್ಪರ್ಧಿಸಲು ಈಗಿನಿಂದಲೇ ರೈತರನ್ನು ಜಾಗೃತಿಗೊಳಿಸಬೇಕೆಂದು ಕರೆ ಕೊಡಲಾಗಿದೆ.

ಉಡುಪಿ :

ಕರ್ನಾಟಕ ಪ್ರಾಂತ ರೈತ ಸಂಘವು ಸೆಪ್ಟೆಂಬರ 29 ರಂದು "ವಿಧಾನ ಸೌಧ ಚಲೋ" ಹೋರಾಟದ ಕರೆ ನೀಡಿದ್ದನ್ನು ಯಶಸ್ವಿಗೊಳಿಸಲು ಉಡುಪಿ ತಾಲೂಕು ರೈತ ಸಂಘದ ಸಮಿತಿಯ ಸಭೆಯಲ್ಲಿ ನಿರ್ಣಯ ಮಾಡಿದೆ. ತಾಲೂಕಿನಾದ್ಯಂತ ಗ್ರಾಮಗಳಲ್ಲಿ ರೈತರ ಸಭೆಗಳನ್ನು ಸೇರಿಸಬೇಕು. ಪ್ರಚಾರ ಜಾತಾಗಳನ್ನು ಸಂಘಟಿಸಿ 3000 ಕರ ಪತ್ರಗಳನ್ನು ಮನೆ ಮನೆಗಳಿಗೆ ಹಂಚಬೇಕೆಂದೂ ಕಾರ್ಕಳ ತಾಲೂಕಿನ ಹೆಬ್ರಿ ಮತ್ತು ಬೆಳ್ಮಣ್ಣುಗಳಲ್ಲಿ ಬಹಿರಂಗ ರೈತರ ಸಭೆಗಳನ್ನು ಜರುಗಿಸಬೇಕೆಂದೂ ನಿರ್ಧರಿಸಲಾಗಿದೆ.

ಚೇರ್ಕಾಡಿ ಗ್ರಾಮದ ರೈತರ ಸಭೆಯು ಸಂಜೀವ ಆಚಾರಿಯವರ ಅಧ್ಯಕ್ಷತೆಯಲ್ಲಿ ತಾ. 3 ರಂದು ಜರುಗಿತು ಕುಕ್ಕೆಹಳ್ಳಿ ಗ್ರಾಮದ ರೈತರ ಸಭೆಯು ಸಾಧು ಸುವರ್ಣರ ಅಧ್ಯಕ್ಷತೆಯಲ್ಲಿ, ಮಲ್ಪಾರು ಗ್ರಾಮದ ರೈತರ ಸಭೆಯು ಕರಿಯಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಕೊಡವೂರು ಮತ್ತು ತೆಂಕ ನಿಡಿಯೂರು ಗ್ರಾಮದ ರೈತರ ಕೃಷಿ ಕೂಲಿಗಾರರ ಸಭೆಯು ಗೋಪಾಲ ಮಾಬೆನ್ನರ ಅಧ್ಯಕ್ಷತೆಯಲ್ಲಿ ಸೇರಿ 13 ಜನರಿರುವ ಕಮಿಟಿ ರಚಿಸಲಾಗಿದೆ. ಗೋಪಾಲ ಮಾಬೆನ್‌ರವರು ಅಧ್ಯಕ್ಷರಾಗಿ, ಕೃಷ್ಣ ಅಮೀನರು ಕಾರ್ಯದರ್ಶಿಗಳಾಗಿ ಆರಿಸಲಾಗಿದೆ.

ಶಿವಳ್ಳಿ, ಮೂಡುತೋನ್ಸೆ ಉಪ್ಪೂರು, ಹಾವಂಜೆ, ಬೆಳ್ಳಂಪಳ್ಳಿ ಪೆರ್ಡೂರು, ಹಂದಾಡಿಗಳಲ್ಲಿ ರೈತ ಕಾರ್ಮಿಕರ ಸಭೆಗಳು ಜರಗಿ ಕಮಿಟಿಗಳನ್ನು ರಚಿಸಲಾಗಿದ್ದು ಕನಿಷ್ಠ 200 ಜನರನ್ನು ತಾಲೂಕಿನಿಂದ ಬೆಂಗಳೂರಿನ ವಿಧಾನ ಸೌಧ ಚಲೋ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡುವ ಸಿದ್ಧತೆ ಭರದಿಂದ ನಡೆಯುತ್ತಿದೆ. ○

ಜನಾರ್ಧನ ಪೂಜಾರಿಗೆ ಪ್ರತಿಭಟನೆ

ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ವಿಳಂಬ ಮಾಡದೆ ಕೂಡಲೇ ಸ್ಥಾಪಿಸಬೇಕು, ಮತ್ತು ಈ ಕಾರ್ಖಾನೆಯ ಸ್ಥಾಪನೆಗೆಂದು ರೈತರಿಂದ ಕಸಿದುಕೊಂಡ ಭೂಮಿಗೆ ಎರಡನೆಯ ಕಂತಿನ ಹಣವನ್ನು ಕೂಡಲೇ ಪಾವತಿ ಮಾಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಡಿ. ವೈ. ಎಫ್. ಐ. ಸಂಘಟನೆಗಳು ಜೊತೆಯಾಗಿ ಕೇಂದ್ರದ ಹಣಕಾಸು ರಾಜ್ಯಸಚಿವ ಜನಾರ್ಧನ ಪೂಜಾರಿಯವರನ್ನು ಅರ್ಧ ಗಂಟೆಗೂ ಹೆಚ್ಚು ಕಾಲ ತೋರಣಗಲ್ಲಿನಲ್ಲಿ ತಡೆದರೆಂದು ವರದಿಯಾಗಿದೆ. ಸಚಿವರು ಸಾಲ ಮೇಳಕ್ಕೆಂದು ಬಳ್ಳಾರಿಗೆ ಹೊರಟಿದ್ದರೆಂದು ತಿಳಿದು ಬಂದಿದೆ. ಭೀಕರ ಬರವನ್ನು ಎದುರಿಸುತ್ತಿರುವ ರಾಜ್ಯಕ್ಕೆ ಕೇಂದ್ರ ಸರ್ಕಾರ ಹೆಚ್ಚು ಧನ ಸಹಾಯ ನೀಡಬೇಕೆಂದು ಒತ್ತಾಯಿಸಲಾಯಿತು.

ರಸ್ತೆಯ ಇಕ್ಕೆಲೆಗಳಲ್ಲಿ ಕಿಕ್ಕಿರಿದು ತುಂಬಿದ್ದ ಸಾವಿರಾರು ಜನರ ಈ ಕೇಳಿಕೆಗೆ ಸಚಿವರು ಹಾರಿಕೆಯ, ಬೇಜವಾಬ್ದಾರಿ ಉತ್ತರ ನೀಡಿದರೆಂದು ತಿಳಿದು ಬಂದಿದೆ. ವಿಜಯನಗರ ಉಕ್ಕಿನ ಕಾರ್ಖಾನೆ ಸದ್ಯಕ್ಕೆ ಸಾಧ್ಯವಿಲ್ಲವೆಂದೂ. ಬರ ಪರಿಹಾರ ರಾಜ್ಯ ಸರ್ಕಾರದ ಮೇಲಿರುವ ಹೊಣೆಯೆಂದು ಬೇಜವಾಬ್ದಾರಿತನದ ಉತ್ತರ ನೀಡಿದಾಗ ಪ್ರದರ್ಶನಕಾರರು ಇದನ್ನು ಪ್ರತಿಭಟಿಸಿದರು.

ಪ್ರದರ್ಶನದ ನೇತೃತ್ವವನ್ನು ಕಾ. ಎಸ್. ಪ್ರಸನ್ನಕುಮಾರ್, ಕಾ. ಯು. ಷಣ್ಮುಖಪ್ಪ - ಶಂಕಣ್ಣ ಚನ್ನಬಸಯ್ಯ ಮುಂತಾದವರು ವಹಿಸಿದ್ದರು.

ಕಲ್ಲು ಹೊಡೆಯುವವರ ಹೋರಾಟಕ್ಕೆ ಜಯ

ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲ್ಲೂಕಿನ ಕಲ್ಲು ಒಡೆಯುವ ಕೆಲಸಗಾರರು ತಮ್ಮ ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯಿಸಿ ಆಗಸ್ಟ್ 17 ರಿಂದ 25 ರ ವರಗೆ ಮುಷ್ಕರ ನಡೆಸಿದರು. ಒಂದು ನೂರು ಕಲ್ಲುಗಳನ್ನು ಒಡೆದರೆ 40 ರೂಪಾಯಿ ಕೂಲಿ ಸಿಗುತ್ತಿದ್ದು ಅದನ್ನು 45 ರೂಪಾಯಿಗೆ ಹೆಚ್ಚಿಸಬೇಕೆಂದು ಎಲ್ಲಾ ಕೆಲಸಗಾರರು ಒಗ್ಗಟ್ಟಿನಿಂದ ಒತ್ತಾಯಿಸಿ ಮುಷ್ಕರ ನಡೆಸಿದ್ದರಿಂದಾಗಿ ಕಂಟ್ರಾಕ್ಟರರು ಬೇಡಿಕೆಗೆ ಒಪ್ಪಿಕೊಳ್ಳಬೇಕಾಯಿತು. ಮುಷ್ಕರದ ನೇತೃತ್ವವನ್ನು ಸಂಘದ ಅಧ್ಯಕ್ಷ ಕಾ. ಶ್ರೀನಿವಾಸ್ ವಹಿಸಿದ್ದರು.

ಕಾರ್ಖಾನೆಯಲ್ಲಿ ಅಪಘಾತ ಸಿ.ಐ.ಟಿ.ಯು ಕಾರ್ಯಕರ್ತನ ಸಾವು

ಸಿ. ಐ. ಟಿ. ಯು ನೇತೃತ್ವದ ಮೈಸೂರು ಕಿರ್ಲೋಸ್ಕರ್ ಕೆಲಸಗಾರರ ಸಂಘದ ಸಕ್ರೀಯ ಸದಸ್ಯ ಕಾಮ್ರೇಡ್ ಥಾಮಸ್ ಇತ್ತೀಚೆಗೆ ಕಂಪನಿಯಲ್ಲಿ ಕೆಲಸ ಮಾಡುತ್ತಾ ಇದ್ದಾಗ ವಿದ್ಯುತ್ ಅಪಘಾತಕ್ಕೆ ತುತ್ತಾಗಿ ಮರಣಹೊಂದಿದರು. ಮೃತರು ಪತ್ನಿ, ಮೂವರು ಚಿಕ್ಕ ಮಕ್ಕಳನ್ನು ಅಗಲಿದ್ದಾರೆ ಕಾ| ಥಾಮಸ್ ಅವರ ಸಾವಿನಿಂದ ಒಬ್ಬ ಉತ್ಸಾಹಿ ಸಿ. ಐ. ಟಿ ಯು ಕಾರ್ಯಕರ್ತನನ್ನು ಕಳೆದುಕೊಂಡಂತ್ತಾಗಿದೆ ಎಂದು ಹರಿಹರ ಸಿ. ಐ. ಟಿ. ಯು ಸಮನ್ವಯ ಸಮಿತಿ ವಿಷಾದ ವ್ಯಕ್ತಪಡಿಸಿದೆ. ಹಾಗೂ ಮೃತರ ಕುಟುಂಬದ ಸದಸ್ಯರಿಗೆ ಸಹಾನುಭೂತಿಯನ್ನು ಕೋರಿದೆ. ಕೇರಳದ ಪಟ್ಟನಟಿಟ್ಟಾ ಜಿಲ್ಲೆಯ ಆಧಿರಂಕಲ್ ಗ್ರಾಮದಲ್ಲಿ ಜರಗಿದ ಅಂತ್ಯ ಕ್ರಿಯೆಯಲ್ಲಿ ನಿತ್ಯಾನಂದಸ್ವಾಮಿ ಮತ್ತು ಜಯಾನಂದ ಮೈಸೂರ್ ಕಿರ್ಲೋಸ್ಕರ್ ಕೆಲಸಗಾರರ ಸಂಘದ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು.

ಉಡುಪಿಯಲ್ಲಿ ವಿಶ್ವಶಾಂತಿ ದಿನಾಚರಣೆ

ಪರಮಾಣು ಅಸ್ತ್ರಗಳನ್ನು ನಾಶಪಡಿಸಿರಿ, ಲೋಕ ಶಾಂತಿ ಚಿರಾಯುವಾಗಲಿ, ಯುದ್ಧ ಖೋರರು ನಾಶವಾಗಲಿ, ವಿಶ್ವಶಾಂತಿ ಚಿರಾಯುವಾಗಲಿ ಎಂಬ ಘೋಷಣೆಗಳನ್ನು ಮೊಳಗಿಸುತ್ತಾ ಉಡುಪಿಯ ಸಿ. ಐ. ಟಿ. ಯು ಸಂಘಟನೆಗಳಿಗೆ ಸೇರಿದ ಹಂಚು ಬೀಡಿ, ನೇಯ್ಗೆ, ಕೃಷಿ ಕಾರ್ಮಿಕರ, ರೈತರ ಬೃಹತ್ ಮೆರವಣಿಗೆಯು ನಗರದ ಮುಖ್ಯ ಬೀದಿಗಳಲ್ಲಿ ಪ್ರದರ್ಶನ ನಡೆಸಿದ ನಂತರ ಉಡುಪಿಯ ರಥಬೀದಿಯಲ್ಲಿ ಸೆಪ್ಟೆಂಬರ್ 1 ರಂದು ಸಂಜೆ 5-30 ಕ್ಕೆ ಬಹಿರಂಗ ಸಭೆಯು ಡೇವಿಡ ಕರ್ಕಡರ ಅಧ್ಯಕ್ಷತೆಯಲ್ಲಿ ಜರುಗಿತು. ಸಾಧು ಅಮೀನರು ಸ್ವಾಗತಿಸಿದರು, ಹರಿಹರ ಕಿರ್ಲೋಸ್ಕರ್ ಕಾರ್ಮಿಕ ಮುಖಂಡ ನಿತ್ಯಾನಂದ ಸ್ವಾಮಿ, ರಾಮ ಕೆ. ಕುಂದರ ಮೊದಲಾದವರು ಭಾಷಣ ಮಾಡಿದರು. ಜಾಗತಿಕ ಕಾರ್ಮಿಕ ಸಂಘಗಳ ಮಹಾ ಮಂಡಳಿ ನೀಡಿದ ಕರೆಯಂತೆ ಸಿ. ಐ. ಟಿ. ಯು. ಕೇಂದ್ರವು ಶಾಂತಿ ದಿನಾಚರಣೆ ಯಶಸ್ವಿಗೊಳಿಸಲು ತನ್ನ ಘಟಕಗಳಿಗೆ ನೀಡಿದ ಕರೆಯಂತೆ ಸೆಪ್ಟೆಂಬರ್ 1 ರಂದು ವಿಶ್ವ ಶಾಂತಿ ದಿನಾಚರಣೆ ನಡೆಸಲಾಯಿತು. ●

ಎಸ್. ಎಫ್. ಐ. ಕಾರ್ಯಕ್ರಮಗಳು

ಗುಲ್ಬರ್ಗ

ಕಳೆದ ಕೆಲವು ಸಮಯಗಳಿಂದ ಮಂದಗತಿಯಲ್ಲಿ ನಡೆಯುತ್ತಿದ್ದ ಎಸ್. ಎಫ್. ಐ ಚಟುವಟಿಕೆಗಳು ಈ ವರ್ಷ ಮೊದಲ ಭಾಗದಿಂದಲೇ ಗುಲ್ಬರ್ಗದಲ್ಲಿ ಆರಂಭವಾಗಿದ್ದು ಉತ್ಸಾಹದಿಂದ ಕೆಲಸಕಾರ್ಯಗಳು ನಡೆಯುತ್ತಿದೆ. ಈಗಾಗಲೇ ಇಲ್ಲಿ ಸುಮಾರು 1 ಸಾವಿರದಷ್ಟು ಸದಸ್ಯರಾಗಿದ್ದಾರೆ.

ಗುಲ್ಬರ್ಗ ಜಿಲ್ಲಾ ಎಸ್. ಎಫ್. ಐ. ಸಂಘಟನಾ ಸಮಿತಿಯನ್ನು ರಚಿಸಲಾಗಿದೆ. ಅದರ ಸಂಚಾಲಕರಾಗಿ ಭವಾನಿ ಸಿಂಗ್ ಠಾಕೂರ್, ಸಹ ಸಂಚಾಲಕರುಗಳಾಗಿ ಪ್ರಭಾಕರ್, ಜಯಪ್ರಕಾಶ್, ವಾಸುದೇವ ಜೋಷಿ ಹಾಗು ಇತರ 10 ಜನರಿರುವ ಸಮಿತಿ ರಚಿಸಲಾಯಿತು.

ನೂತನ ಶಿಕ್ಷಣ ನೀತಿ ಬಗ್ಗೆ ಸಭೆ

ಗುಲ್ಬರ್ಗದ ಎಸ್ ಏಸ್. ಎಲ್. ಕಾನೂನು ಕಾಲೇಜಿನಲ್ಲಿ 28-8-86 ರಂದು ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿಯ ಬಗ್ಗೆ ಸಭೆ ನಡೆಯಿತು.

ಎಸ್ ಎಫ್ ಐ. ಅಧ್ಯಕ್ಷ ಆರ್. ಜಯಕುಮಾರ್‌ರವರು ದೀರ್ಘವಾಗಿ ನೂತನ ಶಿಕ್ಷಣ ನೀತಿಯ ಜನ ವಿರೋಧಿ ನಿಲುವುಗಳನ್ನು ವಿವರಿಸಿ, ಶಿಕ್ಷಕರು ವಿದ್ಯಾರ್ಥಿಗಳು ಈ ನೀತಿಯ ವಿರುದ್ಧ ಪ್ರಬಲ ಪ್ರತಿಭಟನೆ ವ್ಯಕ್ತಪಡಿಸಲು ಕರೆ ನೀಡಿದರು. ○

ವೈಕೋ ಕಾರ್ಮಿಕರಿಂದ ಬಡ ರೈತರಿಗೆ ಜೋಳ ವಿತರಣೆ

ರೈತ - ಕಾರ್ಮಿಕರ ಐಕ್ಯತೆಯ ಪ್ರತೀಕ

ಗುಲ್ಬರ್ಗ

ವೈಕೋ ನೌಕರರ ಸಂಘವು ಬರಗಾಲದಿಂದ ಬೆಂದ ಬಡವರಿಗೆ ಸಹಕರಿಸಲು, ಎರಡು ದಿನದ ಸಂಬಳ ಸಂಗ್ರಹಿಸಿ ಒಂದು ದಿನದ ಸಂಬಳ ಮುಖ್ಯಮಂತ್ರಿ ಪರಿಹಾರ ನಿಧಿಗೂ ಒಂದು ದಿನದ ಸಂಬಳ ಕರ್ನಾಟಕ ಪ್ರಾಂತ ರೈತ ಸಂಘದ ಮುಖಾಂತರ ಬರ ಪರಿಹಾರಕ್ಕೆ ಕೊಟ್ಟಿತು.

ಅದರ ಅಂಗವಾಗಿ ಕರ್ನಾಟಕ ಪ್ರಾಂತ ರೈತ ಸಂಘ ಗುಲಬರ್ಗಾ ಜಿಲ್ಲಾ ಸಮಿತಿಯು ಗುಲ್ಬರ್ಗಾ ತಾಲೂಕಿನ ಶರಣ ಸಿರಸಗಿಯಲ್ಲಿ ಮತ್ತು ಆಳಂದ ತಾಲೂಕಿನ ಅಂಬಲಗಾದಲ್ಲಿ ಜೋಳ ಹಂಚುವ ಕಾರ್ಯಕ್ರಮ ಜರುಗಿತು.

ಉದ್ಘಾಟಕರಾಗಿ ಭಾಗವಹಿಸಿದ್ದ ವೈಕೋ ನೌಕರರ ಸಂಘದ ಅಧ್ಯಕ್ಷರಾದ ಸೂರ್ಯನಾರಾಯಣರಾವ್ ಅವರು ರೈತರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿತರಾಗಬೇಕೆಂದು ಹೇಳಿದರು. ರೈತ ಕಾರ್ಮಿಕರ ಸಂಖ್ಯೆಯಲ್ಲಿ ರಾಜಕೀಯ ಬದಲಾವಣೆ ಮಾಡದೇ ಸಮಸ್ಯೆಗಳಿಗೆ ಪರಿಹಾರವಿಲ್ಲ ಎಂದರು.

ಜನತಾ ಸರಕಾರವು ಬರ ಪರಿಹಾರವನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸದೇ ಇದ್ದುದಲ್ಲದೆ ಭ್ರಷ್ಟಾಚಾರ ತುಂಬಿತುಳುಕುತ್ತಿದೆಂದೂ ರೈತ ಕಾರ್ಮಿಕರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುತ್ತಿಲ್ಲ ಎಂದು ಅಪಾದಿಸಿದರು.

ಸಭೆಯ ಅಧ್ಯಕ್ಷತೆಯನ್ನು ರೈತ ಮುಖಂಡ ಕಲ್ಲಪ್ಪ ಕಿಣಗಿ ವಹಿಸಿದ್ದರು. ಸಿ ಎ ಪಾಟೀಲ್ ಅರುಣಕುಮಾರ, ಶಾಂತವೀರ, ಬಾಬು ಮುಗಳಿ ಹಾಗೂ ಹಸನಬಾನ ಸಭೆಯಲ್ಲಿ ಭಾಷಣ ಮಾಡಿದರು ವೈಕೋ ನೌಕರರ ಸಂಘದ ಖಜಾಂಚಿ ಶಂಕರೇಗೌಡರು ಧಾನ್ಯ ವಿತರಣೆ ಮಾಡಿದರು. 2000 ಜನರಿಗೆ ಜೋಳ ಹಂಚಲಾಯಿತು.

ರಾಯಚೂರು

ರಾಯಚೂರ ಜಿಲ್ಲೆಯ ಕುಷ್ಟಗಿಯಲ್ಲಿ ಬೆಂಗಳೂರಿನ ವೈಕೋ ಕಾರ್ಮಿಕರು ಬರಗಾಲ ಪರಿಹಾರಕ್ಕಾಗಿ ಸಂಗ್ರಹಿಸಿದ ಹಣದಿಂದ ಜೋಳ ವಿತರಣೆ ಮಾಡಲಾಯಿತು. ಅಗಸ್ಟ್ 27 ರಂದು ನಡೆದ ಬೃಹತ್ ಕಾರ್ಯಕ್ರಮದಲ್ಲಿ ವೈಕೋ ಯೂನಿಯನ್ ಅಧ್ಯಕ್ಷ ಸೂರ್ಯನಾರಾಯಣರಾವ್, ಕಾರ್ಯದರ್ಶಿ ವೀರಸ್ವಾಮಿ ಮೊದಲಾದವರು ಭಾಗವಹಿಸಿದ್ದರು. ಜಿಲ್ಲೆಯ ರೈತ ಮುಖಂಡರಾದ ಚಂದ್ರಶೇಖರ ಬಾಳೆ, ಪುರುಶೋತ್ತಮ ಕಲಾಲಬಂಡಿಯವರು ಹಾಗೆಯೇ ತಾಲೂಕಿನ ರೈತ ಮುಖಂಡರೆಲ್ಲ ಕಾರ್ಯಕ್ರಮದ ಯಶಸ್ಸಿಗೆ ಶ್ರಮಪಟ್ಟರು. ರೈತ ಕಾರ್ಯಕರ್ತರು 40 ಹಳ್ಳಿಗಳಲ್ಲಿಯ ಬಡರೈತರನ್ನು ಗುರ್ತಿಸಿ 2000 ಜನರಿಗೆ ಜೋಳ ಹಂಚಿದರು. ಕಾಂಗ್ರೆ ಮತ್ತಿತರ ಪಕ್ಷಗಳ ಮುಖಂಡರು ಈ ಜೋಳ ಹಂಚುವ ಕಾರ್ಯಕ್ರಮದ ವಿರುದ್ಧ ಜನರಲ್ಲಿ ಭೀತಿ ಉಂಟಾಗುವ ರೀತಿಯಲ್ಲಿ ಅಪಪ್ರಚಾರ ಮಾಡಿದ್ದರು. ಸತತ ವಿವರಣೆಗಳ ಮೂಲಕ ರೈತ ಕಾರ್ಯಕರ್ತರು ಅಪ ಪ್ರಚಾರಕ್ಕೆ ಸಮರ್ಪಕ ಉತ್ತರ ನೀಡಿ ರೈತ ಸಂಘದ ಕಾರ್ಯಕ್ರಮ ವಿವರಿಸಿ ವಾತಾವರಣ ತಿಳಿಗೊಳಿಸಿದರು.

ವೈಕೋ ಜಾದಲ್ಲಿ ಇದೇ ರೀತಿ ರೈತರಿಗೆ ಸನಿಕೆ, ಗುದ್ದಲಿಗಳನ್ನು ವಿತರಣೆ ಮಾಡಲಾಯಿತು.

ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ಬಡತನ ನೆಲೆಸಿದೆ ಹಿಡಿಕಾಳಿಗಾಗಿ, ಒಂದು ಊಟಕ್ಕಾಗಿ ಬಡವರು ಯಾವ ರೀತಿ ಕಂಗಾಲಾಗಿದ್ದಾರೆಂಬ ಹಲವಾರು ಸಂಗತಿಗಳು ಈ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ನಡೆಸಿದ ಚಟುವಟಿಕೆಗಳಿಂದ ಕಂಡುಬಂತು.

ಸಾಲ ರದ್ದತಿಗೆ ರೈತರ ಚಳುವಳಿ

ಮಂಗಳೂರು ತಾಲ್ಲೂಕು ರೈತ ಸಂಘದ ಸಭೆಯು ಇತ್ತೀಚೆಗೆ ಪಿ. ಬಾಬುರವರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲ್ಲಿ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ರೈತರು ಇಂದು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು ವಿವರಿಸಿದ ಬಳಿಕ ಸಭೆಯು ಸುಧೀರ್ಘ ಚರ್ಚೆ ನಡೆಸಿ ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಿದೆ.

1. ರೈತ ಸಂಘಕ್ಕೆ ಮಂಗಳೂರು ತಾಲ್ಲೂಕಿನಾದ್ಯಂತ ಸದಸ್ಯತ್ವ ನೊಂದಾಯಿಸಬೇಕು.

2. ಮಂಗಳೂರು ತಾಲ್ಲೂಕಿನಾದ್ಯಂತ ಗ್ರಾಮಾಂತರ ಪ್ರದೇಶದಲ್ಲಿರುವ ಸಣ್ಣ-ಕಿರು ತೋಡುಗಳಲ್ಲಿ ಮಣ್ಣು ತುಂಬಿ ಹೋಗಿ ಎತ್ತರ ಪ್ರದೇಶದಿಂದ ಬರುವ ನೀರು ಹೋಗಲು ಅತಂಕವಾಗಿ ಬೆಳೆ ಬೆಳೆಸಿದ ಗದ್ದೆಗಳಿಂದಲೇ ಹೋಗುವ ಪ್ರಸಂಗ ಉದ್ಭವಿಸಿದೆ. ಇದರಿಂದಾಗಿ ರೈತರು ಬೆಳೆಸಿದ ಬೆಳೆಯು ಸಂಪೂರ್ಣ ನಾಶಕ್ಕೆ ಕಾರಣವಾಗಿದೆ. ಆದುದರಿಂದ ಸರ್ಕಾರ ಕೂಡಲೇ ಈ ತೋಡುಗಳಲ್ಲಿ ತುಂಬಿರುವ ಮಣ್ಣನ್ನು ತೆಗೆಸಿ ತೋಡನ್ನು ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

3. ರೈತರು ಭೂ-ಪರಿಹಾರಕ್ಕಾಗಿ ಭೂ ಅಭಿವೃದ್ಧಿ ಬ್ಯಾಂಕಿನಿಂದ ಪಡೆದ ಸಾಲ ವಸೂಲಿಗಾಗಿ ಇನ್ನೂ ನೋಟೀಸು ಬರುತ್ತಾ ಇದೆ. ರೈತರಿಗೆ ಭೂಮಿ ಧರ್ಮಾರ್ಥ ಎಂದು ಸರ್ಕಾರ ಘೋಷಿಸಿದ ಹಿನ್ನೆಲೆಯಲ್ಲಿ ಈ ಸಾಲವನ್ನು ಸರ್ಕಾರ ಮಾಫಿ ಮಾಡಬೇಕು.

4. ನಗರಾಸ್ತಿಮಿತಿ ಕಾಯಿದೆಯಿಂದ ಸಾಗುವಳಿ ಭೂಮಿಯುಳ್ಳ ರೈತರಿಗೆ ದೊಡ್ಡ ಅನ್ಯಾಯವಾಗಿರುವುದರಿಂದ ಸಾಗುವಳಿ ಭೂಮಿಯನ್ನು ಈ ಕಾಯಿದೆಯಿಂದ ಹೊರತು ಪಡಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಭೆಯು ಸರ್ಕಾರವನ್ನು ವಿನಂತಿಸಿಕೊಂಡಿದೆ. ಸಭೆಯಲ್ಲಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಅಬ್ರಹಾಂ ಕರ್ಕಡ, ಜನಾರ್ಧನ ನಾಯಕ್, ವಿಷ್ಣುಮೂರ್ತಿ ಮೊದಲಾದವರು ರೈತರ ಸಮಸ್ಯೆಗಳ ಬಗ್ಗೆ ವಿವರಿಸಿ ಪರಿಹಾರದ ಸಲಹೆಗಳನ್ನಿತ್ತಿರುವುದಾಗಿ ವರದಿಯಾಗಿದೆ.

ವಿಶ್ವಶಾಂತಿ ದಿನಾಚರಣೆ – ಬೃಹತ್ ಮೆರವಣಿಗೆ

ಸಿ ಐ ಟಿ ಯುವಿನ ಕೇಂದ್ರ ಮತ್ತು ರಾಜ್ಯ ಸಮಿತಿಯು ಸಪ್ಟೆಂಬರ್ ಒಂದನ್ನು "ಶಾಂತಿಗಾಗಿ ಕಾರ್ಮಿಕ ಸಂಘಗಳ ಕಾರ್ಯಾಚರಣೆಯ ದಿನ" ವನ್ನಾಗಿ ಆಚರಿಸ ಬೇಕೆಂಬ ಕರೆಯ ಮೇರೆಗೆ ತಾರಿಕು 1-9-1986 ರಂದು ಕುಂದಾಪುರದಲ್ಲಿ ಸಿ ಐ ಟಿ ಯು ಗೆ ಸೇರಿದ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಿತು. ಪ್ರಾರಂಭದಲ್ಲಿ ವಿ. ಮಾಹಾಬಲನವರು ಶಾಂತಿ ಮಹತ್ವವನ್ನು ತಿಳಿಸಿ ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ದ.ಕ. ಹಂಚಿನ ಮಜೂರರ ಸಂಘದ ಅದ್ಯಕ್ಷರಾದ ಅಬ್ರಹಾಂ ಕರ್ಕಡರವರು ವಹಿಸಿದ್ದರು.

ಸಭೆಯನ್ನುದ್ದೇಶಿಸಿ ವಿದ್ಯಾರ್ಥಿ ಮುಖಂಡ ಕೆ. ವಿಶ್ವನಾಥನವರು ಹಾಗೂ ಸಿ ಐ ಟಿ ಯು ವಿನ ಮುಂದಾಳುಗಳಾದ ಸಿ. ನಾರಾಯಣ ಮತ್ತು ಕೆ. ಶಂಕರ್ ರವರು ಮಾತನಾಡಿ ಸಾಮ್ರಾಜ್ಯಶಾಹಿಯ ಯುದ್ಧ ಖೋರ ನೀತಿಯನ್ನು ಖಂಡಿಸಿದರು.

ಅಧ್ಯಕ್ಷತೆ ವಹಿಸಿದ ಅಬ್ರಹಾಂ ಕರ್ಕಡರವರು ಮಾತನಾಡಿ ಇತ್ತೀಚೆಗೆ ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಗೋರ್ಬಚೇವ್ ಅವರು ಅಣ್ವಸ್ತ್ರ ನಿಶೇಧದ ಹಲವಾರು ಸೂಚನೆಗಳನ್ನು ರೇಗನ್ ಅವರಿಗೆ ಕಳುಹಿಸಿದರೂ ಕೂಡ ಅವುಗಳನ್ನೆಲ್ಲ ತಿರಸ್ಕರಿಸಿ ಆತ್ಮರಕ್ಷಣೆಗಾಗಿ ಅಣ್ವಸ್ತ್ರಗಳನ್ನು ತಯಾರಿಸುವ ಕಾರ್ಯ ಮುಂದುವರಿಸುವುದಾಗಿ ಸಾಮ್ರಾಜ್ಯಶಾಹಿ ವಕ್ತಾರರು ಸ್ಪಷ್ಟಪಡಿಸಿದ್ದಾರೆ. ಆದುದರಿಂದ ಅಣು ಯುದ್ಧದ ಅಪಾಯವು ಇನ್ನೂ ಮುಂದುವರೆಯುತ್ತಿದೆ. ಇದರ ಅರಿವು ಜನ ಸಾಮಾನ್ಯರಲ್ಲಿ ಮೂಡಿಸಿ ಯುದ್ಧದ ವಿರುದ್ಧ ಅಂದರೆ ಶಾಂತಿ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಬೇಕೆಂದು ಹೇಳಿದರು. ○

ಪ್ರೆಸ್ ಕಾರ್ಮಿಕರ ಹೋರಾಟಕ್ಕೆ ಸಿದ್ಧತೆ

ಉಡುಪಿ ತಾಲೂಕು ಪ್ರೆಸ್ ಕಾರ್ಮಿಕರ ಸಮಾವೇಶ ಇತ್ತೀಚೆಗೆ ಉಡುಪಿಯಲ್ಲಿ ಜರುಗಿತು. ಈ ಸಭೆಯಲ್ಲಿ ರಾಜ್ಯ ಸರಕಾರಿ ನೌಕರರ ಮುಖಂಡರಾದ ಎಸ್. ಎಸ್. ತೋನ್ಸೆಯವರು ಮಾತಾಡುತ್ತಾ ಪ್ರೆಸ್ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಮತ್ತು ಹಕ್ಕುಗಳಿಗಾಗಿ ಸಂಘಟಿತರಾಗಿ ಹೋರಾಡುವುದು ಅಗತ್ಯ ಎಂದರು.

ವಿಮಾ ನೌಕರರ ಸಂಘದ ಪಿ. ವಿಶ್ವನಾಥ ರೈ ಯವರು ಮಾತಾಡುತ್ತಾ ಸರಕಾರ ಹೊರಡಿಸಿದ ತುಟ್ಟಿಭತ್ತೆಯನ್ನು ಕಾರ್ಮಿಕರಿಗೆ ಕೊಡವಾಗ ಮಾಲಿಕರು ನೌಕರರ ಮೂಲ ವೇತನವನ್ನೇ ಕಡಿತಗೊಳಿಸಿ ತುಟ್ಟಿಭತ್ತೆಗೆ ಹೊಂದಾಣಿಕೆ ಮಾಡುವುದು ದೊಡ್ಡ ಮೋಸಗಾರಿಕೆ. ಇದರ ವಿರುದ್ಧವಾಗಿ ಕಾರ್ಮಿಕರು ಸಂಘಟಿತರಾಗಿ ಪ್ರಬಲವಾದ ಹೋರಾಟವನ್ನು ನೀಡುವುದು ಅಗತ್ಯ ಎಂದರು.

ಮೂಲ ವೇತನವನ್ನು ಕಡಿತಗೊಳಿಸದೆ ತುಟ್ಟಿಭತ್ತೆಯನ್ನು ಪ್ರತ್ಯೇಕವಾಗಿ ಕೊಡುವಂತೆ ಮಾಲಿಕರನ್ನು ಒತ್ತಾಯಿಸುವುದಕ್ಕೆ ಹೋರಾಟವನ್ನು ನಡೆಸಬೇಕೆಂದು ಸಭೆಯು ತೀರ್ಮಾನಿಸಿತು. ಅದಕ್ಕಾಗಿ ಹೋರಾಟ ಸಮಿತಿಯೊಂದನ್ನು ರಚಿಸಲಾಯಿತು.

ಈ ಸಭೆಯ ಅಧ್ಯಕ್ಷತೆಯನ್ನು ಯು. ಕೃಷ್ಣಮೂರ್ತಿ ರಾವ್ ವಹಿಸಿದ್ದರು. ಸಭೆಯ ಮೊದಲು ರಮೇಶ ಮೆಂಡಸ್ ಸ್ವಾಗತಿಸಿ ಕೊನೆಗೆ ಕೃತಜ್ಞತೆ ಸಲ್ಲಿಸಿದರು. ○

ಸಿಪಾನಿ ಫೈಬರ್ಸ್ ಕೆಲಸಗಾರರ ವಿಜಯ

ಬೆಂಗಳೂರಿನಲ್ಲಿರುವ ಸಿಪಾನಿ ಫೈಬರ್ಸ್ ಕೆಲಸಗಾರರು 7 ತಿಂಗಳು ವೀರ ಹೋರಾಟ ನಡೆಸಿದ ನಂತರ ಮಾಲಿಕರು ಒಂದು ಒಪ್ಪಂದಕ್ಕೆ ಬಂದಿದ್ದಾರೆ. ಆ ಒಪ್ಪಂದದ ಪ್ರಕಾರ ಪ್ರತಿಯೊಬ್ಬ ಕೆಲಸಗಾರನಿಗೆ ಸಂಬಳದಲ್ಲಿ ರೂ 200 ಹೆಚ್ಚಳ, ಪ್ರತಿ ದಸರಕ್ಕೆ (ಆಯುಧ ಪೂಜಾ) ರಜೆ ಸವಲತ್ತಿಗಾಗಿ ರೂ. 100, ಮಕ್ಕಳ ಶಿಕ್ಷಣಕ್ಕಾಗಿ ರೂ. 100 ಕೊಡಲಾಗುವುದು. ಕಾಶ್ಯುಲ್ ದಿವಸಗಳಿಗೆ ರೂ. 400, ಶೇ 10 ಬೋನಸ್ ದೊರೆಯಲಿದೆ.

ಸಮವಸ್ತ್ರ, ಶಿಫ್ಟ್ ಅಲವೆನ್ಸ್ ರಜೆ ಮೊದಲಾದ ಸೌಲಭ್ಯಗಳನ್ನು ಮೊದಲನೇ ಸಲ ಒದಗಿಸಲು ಒಪ್ಪಿಗೆಯಾಗಿದೆ. ಕಾರ್ಖಾನೆಯನ್ನು ಆಧುನೀಕರಣಗೊಳಿಸಿದ ಕಾರಣ 4 ಕೆಲಸಗಾರರಪೈಕಿ 3ರನ್ನು ಕೆಲಸದಿಂದ ತೆಗೆದು ಹಾಕುವ ಪರಿಸ್ಥಿತಿಯಿದ್ದರೂ ಕೂಡ ಯಾವೊಬ್ಬ ಕೆಲಸಗಾರನನ್ನೂ ಕೆಲಸದಿಂದ ತೆಗೆದು ಹಾಕದಂತೆ ಯೂನಿಯನ್ ನೋಡಿಕೊಂಡಿದೆ.

ಇದರಂತೆಯೇ ಹೆಚ್ಚಿನ ಮಹಿಳಾ ಕಾರ್ಮಿಕರಿರುವ ಸೇಫ್ ಗಾರ್ಡ್ ಪ್ಯಾಕಿಂಗ್ ಸಿಸ್ಟಂ ಕಾರ್ಖಾನೆಯಲ್ಲಿ ಮೂರು ತಿಂಗಳ ಹೋರಾಟದನಂತರ ಕೆಲಸಗಾರರಿಗೆ ಅನುಕೂಲಕರವಾದ ಒಪ್ಪಂದವಾಗಿದೆಂದು ಯೂನಿಯನ್ ಪ್ರ. ಕಾರ್ಯದರ್ಶಿ ಎ. ಎಂ. ಜಾನ್ ವಿನ್ಸೆಂಟ್ ತಿಳಿಸಿದ್ದಾರೆ. ○

ಎ. ಬಿ. ಎಲ್ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ

ಶಹಾಬಾದ ಎ. ಬಿ. ಎಲ್ ಕಾರ್ಮಿಕರು 1-9-86 ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ಹೂಡಿದ್ದಾರೆ. ಆಡಳಿತ ವರ್ಗ ಕಾರ್ಮಿಕರಿಗೆ ವೇತನ ಹೆಚ್ಚಳ, ತುಟ್ಟಿಭತ್ಯೆ ಹಾಗೂ 8 ಗಂಟೆ ಕೆಲಸ ಮುಂತಾದ ಬೇಡಿಕೆಗಳಿಗಾಗಿ ಕಾರ್ಮಿಕರ ಮುಖಂಡರ ಜೊತೆ ಮಾತುಕತೆಗೂ ಸಹ ಬಾರದೆ ಸರ್ವಾಧಿಕಾರಿ ಪ್ರವೃತ್ತಿ ತೋರಿಸಿದರಿಂದ ಕಾರ್ಮಿಕರು ಮುಷ್ಕರದ ಹಾದಿ ಹಿಡಿಯ ಬೇಕಾಯಿತು.

ಈ ಮುಷ್ಕರಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಗುಲಬರ್ಗಾವು ಬೆಂಬಲಿಸುತ್ತದೆ.

ಉದಾರವಾದದ ವಿರುದ್ಧ ಹೋರಾಡೋಣ

ಈಗ ನಾವು ತೀವ್ರವಾದ ಸೈದ್ಧಾಂತಿಕ ಹೋರಾಟ ನಡೆಸುತ್ತಿದ್ದೇವೆ. ಕಾರಣ ಅದು ನಾವು ನಡೆಸುವ ಹೋರಾಟಕ್ಕೆ ಪೂರಕವಾಗಿ ಪಕ್ಷದ ಐಕ್ಯತೆಯನ್ನು ಸ್ಥಿರಪಡಿಸುವುದಕ್ಕೆ ಕ್ರಾಂತಿಕಾರೀ ಸಂಘಟನೆಯ ಐಕ್ಯತೆಯನ್ನು ಸ್ಥಾಪಿಸುವುದಕ್ಕೆ ಇರುವಂತಹ ಒಂದು ಉಪಕರಣ. ಪ್ರತಿಯೊಬ್ಬ ಕಮ್ಯೂನಿಸ್ಟನೂ, ಪ್ರತಿಯೊಬ್ಬ ಕ್ರಾಂತಿಕಾರಿಯೂ ಈ ಉಪಕರಣವನ್ನು ಬಳಸಬೇಕಾಗಿದೆ.

ಆದರೆ ಉದಾರವಾದ ಸೈದ್ಧಾಂತಿಕ ಹೋರಾಟವನ್ನು ವಿರೋಧಿಸುತ್ತದೆ. ಅರಾಜಕ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ. ಈ ರೀತಿಯಲ್ಲಿ ಬಲಹೀನವಾದ Philistine ವಿಧಾನವೊಂದನ್ನು ಸೃಷ್ಟಿಸಿ ಪಕ್ಷದಲ್ಲೂ, ಕ್ರಾಂತಿಕಾರೀ ಸಂಘಟನೆಗಳಲ್ಲೂ ಇರುವ ಕೆಲವು ಗುಂಪುಗಳಲ್ಲೂ-ವ್ಯಕ್ತಿಗಳಲ್ಲೂ ರಾಜಕೀಯ ಗೊಂದಲವನ್ನು ಉಂಟುಮಾಡುತ್ತದೆ.

ಉದಾರವಾದ ಹಲವಾರು ರೂಪಗಳಲ್ಲಿ ಅಭಿವ್ಯಕ್ತಿ ಪಡೆಯುತ್ತದೆ.

ಪಕ್ಷದಲ್ಲಿರುವ ವ್ಯಕ್ತಿಯೊಬ್ಬರು ತಪ್ಪು ಮಾಡಿದ್ದಾರೆಂಬುದು ಸ್ಪಷ್ಟವಾದ ನಂತರವೂ ಸಹ, ಅವರು ಬಹು ದಿನಗಳಿಂದಲೂ ನನ್ನ ಜೊತೆಯಲ್ಲಿರುವವರು, ಒಂದೇ ಪ್ರದೇಶಕ್ಕೆ ಸೇರಿದವರು, ಒಂದೇ ಶಾಲೆಯಲ್ಲಿ ಕಲಿತವರು, ತೀರಾ ಹತ್ತಿರದ ಸ್ನೇಹಿತರು, ಪ್ರೀತಿಪಾತ್ರರು, ಹಳೆಯ ಸಹಪಾಠರು ಎಂಬ ಕಾರಣದಿಂದಾಗಿ ಅವರ ಮೇಲೆ ನಿಷ್ಪಕ್ಷಪಾತವಾಗಿ ಕ್ರಮ ಕೈಗೊಳ್ಳುವ ಬದಲಾಗಿ, ಸಮಾಧಾನಗೊಳಿಸುವುದಕ್ಕಾಗಿಯೂ ಗೆಳೆತನದ ಕಾರಣಕ್ಕಾಗಿಯೂ ವಿಷಯಗಳನ್ನು ಜಾರಿಸುವುದು; ಅಥವ ಉತ್ತಮ ಸಂಬಂಧವನ್ನು ಮುಂದುವರಿಸಿಕೊಂಡು ಹೋಗುವ ಕಾರಣಕ್ಕಾಗಿ ಸಮಸ್ಯೆಗೆ ಪೂರ್ಣವಾದ ಪರಿಹಾರ ಕಂಡುಹಿಡಿಯುವುದಕ್ಕೆ ಬದಲಾಗಿ, ಅವುಗಳನ್ನು ಪರಿಶೀಲಿಸಿದಂತೆ ಮಾಡಿ ಬಿಟ್ಟುಬಿಡುವುದು, ಇದರಿಂದಾಗಿ ಸಂಘಟನೆಗೂ, ವ್ಯಕ್ತಿಗಳಿಗೂ ಧಕ್ಕೆಯುಂಟಾಗುತ್ತದೆ. ಇದು ಉದಾರವಾದದ ಮೊದಲನೆಯ ರೂಪ.

ಸಂಘಟನೆಯ ಮುಂದೆ ತನ್ನ ಅನಿಸಿಕೆಗಳನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ಬದಲಾಗಿ ಬೆನ್ನ ಹಿಂದೆ ಬೇಜವಾಬ್ದಾರಿ ಚರ್ಚೆಗಳಲ್ಲಿ ತೊಡಗುವುದು, ಎದುರಿಗೆ ನೇರವಾಗಿ ಏನನ್ನೂ ಹೇಳದೆ ಅವರ ಬೆನ್ನ ಹಿಂದೆ ಬಡಬಡಿಸುವುದು. ಸಭೆಯಲ್ಲಿ ಏನನ್ನೂ ಮಾತನಾಡದೆ ಸಭೆ ಮುಗಿದ ನಂತರ ಬಾಯಿಗೆ ಬಂದದ್ದನ್ನು ಮಾತನಾಡುವುದು; ಸಾಂಘಿಕ ವಿಧಾನವನ್ನು ಕೈಬಿಟ್ಟು ವೈಯಕ್ತಿಕ ವಿಧಾನವನ್ನು ಅನುಸರಿಸುವುದು ಇದು ಉದಾರವಾದದ ಎರಡನೆಯ ರೂಪ.

ಯಾವುದೇ ವಿಷಯ ತನ್ನನ್ನು ನೇರವಾಗಿ ಬಾಧಿಸದೆ ಇದ್ದಾಗ ಅದನ್ನು ಜಾರಿಸಿ ಬಿಡುವುದು; ಯಾವುದೇ ಒಂದು ವಿಷಯ ಸಂಪೂರ್ಣವಾಗಿ ತಪ್ಪು ಎಂಬುದು ತಿಳಿದಿದ್ದರೂ ಅದರ ಬಗ್ಗೆ ಸಾಧ್ಯವಾದಷ್ಟು ಉದಾರವಾಗಿ ಮಾತನಾಡುವುದು ತಾನು ಸಿಕ್ಕಿ ಹಾಕಿಕೊಳ್ಳದ ಹಾಗೆ ಸುರಕ್ಷಿತ ವಿಧಾನ ಅನುಸರಿಸುವುದು, ಪ್ರಪಂಚವನ್ನೆಲ್ಲಾ ಬಲ್ಲವರಂತೆ ವರ್ತಿಸುವುದು ಇದು ಮೂರನೆಯ ರೂಪ.

ಸಂಘಟನೆಯ ತೀರ್ಮಾನ, ಆದೇಶಗಳಿಗೆ ಬೆಲೆ ಕೊಡದೆ ತನ್ನ ವೈಯಕ್ತಿಕ ಅಭಿಪ್ರಾಯಗಳನ್ನೇ ಸರಿಯೆಂದು ಭಾವಿಸಿ ಅದಕ್ಕೆ ಪ್ರಮುಖ ಸ್ಥಾನ ಕೊಡುವುದು, ಸಂಘಟನೆಯಿಂದ ವಿಶೇಷ ರಿಯಾಯಿತಿ ಸೌಲಭ್ಯಗಳನ್ನು ಕೋರುವುದು, ಆದರೆ ಸಂಘಟನೆಯ ಕಟ್ಟುಪಾಡುಗಳನ್ನು ಮೀರಿ ವರ್ತಿಸುವುದು ಇದು ನಾಲ್ಕನೆಯ ರೂಪ.

ಒಗ್ಗಟ್ಟನ್ನು ಮೂಡಿಸುವುದಕ್ಕಾಗಿಯಾಗಲೀ ಅಥವ ಅಭಿವೃದ್ಧಿ ಪಡಿಸುವುದರತ್ತ ಆಗಲಿ ಅಥವ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವುದರತ್ತ ಆಗಲಿ ಪ್ರಯತ್ನಿಸದೆ ಕೇವಲ ವ್ಯಕ್ತಿಗತ ಆಕ್ರಮಣ ನಡೆಸುವುದಕ್ಕಾಗಿ, ವೈಯಕ್ತಿಕ ವಿರೋಧಗಳನ್ನು ನಿರ್ನಾಮ ಮಾಡಲು ಅಥವ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ತಪ್ಪಾದ ಧೋರಣೆಗಳ ವಿರುದ್ಧವಾದ ಹೋರಾಟಗಳಲ್ಲಿ ತೊಡಗುವುದು ಇದು ಉದಾರವಾದದ ಐದನೆಯ ರೂಪ.

ಸರಿಯಲ್ಲದ ಧೋರಣೆಗಳನ್ನು ನಿರಾಕರಿಸದೆ ಒಪ್ಪಿಕೊಳ್ಳುವುದು, ಪ್ರತಿಕ್ರಾಂತಿಕಾರಿಗಳು ಹೇಳುವುದನ್ನು ಸಹ ಸಂಘಟನೆಗೆ ತಿಳಿಯಪಡಿಸದೆ ಇರುವುದು, ಅದಕ್ಕೆ ವಿರುದ್ಧವಾಗಿ ಏನೂ ನಡೆದೇ ಇಲ್ಲವೇನೋ ಎನ್ನುವಂತೆ ಅವುಗಳನ್ನು ತೀರಾ ಕ್ಷುಲ್ಲಕ ವಿಷಯವೆಂಬಂತೆ ನಟಿಸುವುದು ಇದು ಆರನೆಯ ರೂಪ.

ಜನತೆಯ ನಡುವೆಯೇ ಇದ್ದೂ ಸಹ ಪಕ್ಷದ ತತ್ವವನ್ನು ಪ್ರಚಾರ ಮಾಡದೆ, ಜಾಗೃತಗೊಳಿಸದೆ ಇರುವುದು, ಅಥವ ಸಭೆಗಳಲ್ಲಿ ಮಾತನಾಡದೆ ಇರುವುದು, ಅಥವ ಜನರನ್ನು ಕಂಡು ಅವರ ಸಮಸ್ಯೆಗಳನ್ನು ವಿಚಾರಿಸದೆ ಇರುವುದು. ಜನತೆಯ ಕಡೆಗೆ ಗಮನ ಹರಿಸದೆ ಅವರ ಹಿತಾಸಕ್ತಿಯ ಕಡೆಗೆ ಕಾಳಜಿ ವಹಿಸದೆ ತಾನೊಬ್ಬ ಕಮ್ಯೂನಿಸ್ಟ್ ಎಂಬುದನ್ನು ಮರೆತು ಒಬ್ಬ ಸಾಧಾರಣ ವ್ಯಕ್ತಿಯಂತೆ ವರ್ತಿಸುವುದು ಇದು ಉದಾರವಾದದ ಏಳನೆಯ ರೂಪ.

ಯಾರೋ ಒಬ್ಬರು ಜನತೆಯ ಹಿತಕ್ಕೆ ಧಕ್ಕೆ ತರುವಂತಹ ಕೆಲಸ ಮಾಡುತ್ತಿರುವುದನ್ನು ಕಂಡೂ ಸಹ ಸೂಕ್ತ ಕ್ರಮ ಕೈಗೊಳ್ಳದೆ, ಅಥವ ಅವರಿಗೆ ಬುದ್ಧಿವಾದ ಹೇಳದೆ, ಅಥವ ಅವರನ್ನು ತಡೆಯದೆ ಅಥವ ಅವರೊಂದಿಗೆ ಅವರು ಮಾಡುತ್ತಿರುವ ತಪ್ಪನ್ನು ಎತ್ತಿ ತೋರಿಸಿ ವಾದಿಸದೆ ಇರುವುದು ಇದು ಎಂಟನೆಯ ರೂಪ.

ಒಂದು ಸ್ಪಷ್ಟವಾದ ಯೋಜನೆ ಅಥವ ಗುರಿಯಿಲ್ಲದೆ ಅರೆಮನಸ್ಸಿನಿಂದ ಕೆಲಸ ಮಾಡುವುದು ಅಲಕ್ಷ್ಯ ಭಾವನೆಯಿಂದ ಬೇಕಾಬಿಟ್ಟಿ ಕೆಲಸ ಮಾಡುವುದು ಇದು ಒಂಬತ್ತನೆಯದು.

> ಮಾವೋರವರ ಮರಣದ ಹತ್ತನೆಯ ವಾರ್ಷಿಕಾಚರಣೆ ಇದೇ ತಿಂಗಳ 9ನೇ ದಿನಾಂಕದಂದು. ಉದಾರವಾದದ ಸೈದ್ಧಾಂತಿಕ ನೆಲೆಯ ಬಗ್ಗೆ, ಅದರ ಅಪಾಯದ ಬಗ್ಗೆ ಅವರು ಬರೆದಿರುವ ಲೇಖನ ಕರ್ನಾಟಕದ ಪಕ್ಷದ ಬೆಳವಣಿಗೆಯ ಇಂದಿನ ಘಟ್ಟಕ್ಕೆ ಅತ್ಯಂತ ಪ್ರಸ್ತುತವಾಗಿದೆ.

ಕ್ರಾಂತಿಗೆ ತಾನು ಏನೋ ದೊಡ್ಡ ಕೊಡುಗೆ ನೀಡುತ್ತಿದ್ದೇನೆ ಎಂಬುದಾಗಿ ಭಾವಿಸುವುದು ತಾನು ತುಂಬಾ ಅನುಭವಸ್ಥನೆಂದು ತನಗೆ ತಾನೇ ಹೆಮ್ಮೆ ಪಟ್ಟುಕೊಳ್ಳುವುದು, ಉನ್ನತ ಕರ್ತವ್ಯಗಳನ್ನು ನಿರ್ವಹಿಸುವ ಯೋಗ್ಯತೆ ಇಲ್ಲದೆ ಸಣ್ಣ ಪುಟ್ಟ ಕೆಲಸ ಕಾರ್ಯಗಳನ್ನು ಅಗೌರವದಿಂದ ಕಾಣುವುದು ಕೆಲಸದಲ್ಲಿ ಶ್ರದ್ಧೆ ಇಲ್ಲದೆ, ಕಲಿಯುವುದರಲ್ಲಿ ಆಸಕ್ತಿ ಇಲ್ಲದೆ ಇರುವುದು ಇದು ಉದಾರವಾದದ ಹತ್ತನೆಯ ರೂಪ.

ತನ್ನ ಸ್ವಂತ ತಪ್ಪುಗಳ ಬಗ್ಗೆ ತಿಳಿವಳಿಕೆ ಇದ್ದೂ ಸಹ ಅವುಗಳನ್ನು ಸರಿಪಡಿಸಿಕೊಳ್ಳಲು ಯಾವ ಪ್ರಯತ್ನವನ್ನೂ ಮಾಡದೆ ಸ್ವಯಂ ಉದಾರವಾದವನ್ನು ಅನುಸರಿಸುವುದು ಇದು ಹನ್ನೊಂದನೆಯ ರೀತಿ.

ನಾವು ಇನ್ನೂ ಅನೇಕ ರೀತಿಯ ಉದಾರವಾದದ ಲಕ್ಷಣಗಳನ್ನು ಕಾಣಬಹುದು ಆದರೆ ಈ ಹನ್ನೊಂದು ಲಕ್ಷಣಗಳು ಪ್ರಮುಖವಾದವುಗಳು.

ಒಂದು ಕ್ರಾಂತಿಕಾರೀ ಸಾಂಘಿಕ ಜೀವನದಲ್ಲಿ ಉದಾರವಾದವು ತೀವ್ರವಾದ ಧಕ್ಕೆಯನ್ನುಂಟು ಮಾಡುತ್ತದೆ. ಉದಾರವಾದ ಒಗಟ್ಟನ್ನು ಮುರಿಯುವ, ಪಕ್ಷದಲ್ಲಿ ಅನೈಕ್ಯತೆಯನ್ನು ಬೆಳೆಸುತ, ಕರ್ತವ್ಯದಿಂದ ವಿಮುಖರನ್ನಾಗಿಸುವ ದ್ವೇಷವನ್ನು ಬಿತ್ತುವ ಒಂದು ಸಾಧನವಾಗಿದೆ. ಇದು ಕ್ರಾಂತಿಕಾರೀ ಸಂಘಟನೆಗಳಲ್ಲಿರುವ ಶಿಸ್ತುಬದ್ಧ ವ್ಯವಸ್ಥೆಯನ್ನು, ಕಟ್ಟುನಿಟ್ಟಾದ ನಿಯಮಗಳನ್ನು ಹಾಳು ಮಾಡುತ್ತವೆ. ಪಕ್ಷದ ತತ್ವಗಳು ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತೊಡಗುವಲ್ಲಿ ಅಡ್ಡಿಯುಂಟುಮಾಡುತ್ತದೆ. ಪಕ್ಷದ ನಾಯಕತ್ವದಡಿಯಲ್ಲಿರುವ ಜನತೆಯಿಂದ ಪಕ್ಷವನ್ನು ಪ್ರತ್ಯೇಕಿಸುವಂತಹ ಭೀಕರ ಪರಿಸ್ಥಿತಿಯನ್ನು ತಂದೊಡ್ಡುತ್ತದೆ.

ಪುಟ್ಟ ಬಂಡವಾಳಗಾರ ವರ್ಗದ ಮನೋಭಾವದಿಂದಾಗಿ ಉದಾರವಾದ ಜನಿಸುತ್ತದೆ. ಇದು ಸ್ವಂತ ಹಿತವನ್ನು ಮೊದಲನೆಯ ಸ್ಥಾನದಲ್ಲಿಯೂ ಕ್ರಾಂತಿಕಾರೀ ಹಿತಾಸಕ್ತಿಯನ್ನು ನಂತರದ ಸ್ಥಾನದಲ್ಲಿಯೂ ಸ್ಥಾಪಿಸುತ್ತದೆ ಇದು ಸೈದ್ಧಾಂತಿಕ, ರಾಜಕೀಯ ಸಂಘಟನಾ ರಂಗಗಳಲ್ಲಿ ಉದಾರವಾದವನ್ನು ಸೃಷ್ಟಿಸುತ್ತದೆ.

ಉದಾರವಾದಿಗಳು ಮಾರ್ಕ್ಸ್‌ವಾದೀ ನಿಯಮಗಳನ್ನು ಕೇವಲ ಒಣ ತತ್ತ್ವಗಳೆಂಬುದಾಗಿ ಭಾವಿಸುತ್ತಾರೆ; ಉದಾರ ವಾದಿಗಳು ಮಾರ್ಕ್ಸ್‌ವಾದವನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಅದನ್ನು ಕಾರ್ಯ ರೂಪಕ್ಕೆ ತರುವುದಕ್ಕೆ ಅವರು ಸಿದ್ಧರಿಲ್ಲ. ತಮ್ಮ ಉದಾರವಾದಕ್ಕೆ ಪ್ರತಿಯಾಗಿ ಆ ಸ್ಥಾನದಲ್ಲಿ ಮಾರ್ಕ್ಸ್‌ವಾದವನ್ನು ಸ್ಥಾಪಿಸಿಕೊಳ್ಳಲು ತಯಾರಿಲ್ಲ. ಇಂಥ ವ್ಯಕ್ತಿಗಳಲ್ಲಿ ಮಾರ್ಕ್ಸ್‌ವಾದದ ಜೊತೆಗೇ ಉದಾರವಾದವೂ ಇರುತ್ತದೆ. ಅವರು ಮಾರ್ಕ್ಸ್‌ವಾದವನ್ನು ಮಾತನಾಡುತ್ತಾರೆ; ಆದರೆ ಉದಾರವಾದವನ್ನು ಕಾರ್ಯಗತಗೊಳಿಸುತ್ತಿರುತ್ತಾರೆ. ಇತರರಿಗೆ ಮಾರ್ಕ್ಸ್‌ವಾದವನ್ನೂ ತಮಗೆ ಉದಾರವಾದವನ್ನೂ ಅನ್ವಯಿಸಿಕೊಳ್ಳುತ್ತಾರೆ. ಉದಾರವಾದಿಗಳು ಎರಡು ರೀತಿಯ ಸರಕುಗಳನ್ನು ತಮ್ಮೊಂದಿಗೆ ಇಟ್ಟುಕೊಂಡು ಎರಡನ್ನು ಸಂದರ್ಭಾನುಸಾರ ಉಪಯೋಗಿಸುತ್ತಿರುತ್ತಾರೆ. ಕೆಲವರ ಪ್ರಜ್ಞೆ ಇದೇ ರೀತಿಯಲ್ಲಿ ಕೆಲಸ ಮಾಡುತ್ತಿರುತ್ತದೆ.

ಉದಾರವಾದ ಎನ್ನುವುದು ಸಂದರ್ಭವಾದದ ಒಂದು ಅಭಿವ್ಯಕ್ತ ರೂಪ, ಅದು ಮಾರ್ಕ್ಸ್‌ವಾದೀ ಸಿದ್ಧಾಂತದೊಂದಿಗೆ ಘರ್ಷಣೆ ನಡೆಸುತ್ತದೆ ಅದು ಪ್ರತ್ಯಕ್ಷವಲ್ಲದ ರೀತಿಯಲ್ಲಿ ಕಾರ್ಯ ನಿರ್ವಹಿಸುವ ಗುಣ ಪಡೆದಿರುವುದರೊಟ್ಟಿಗೆ ವರ್ಗ ಶತ್ರುಗಳಿಗೆ ಸಹಾಯಕವಾಗುವಂತಹ ಸನ್ನಿವೇಶವನ್ನು ಕಲ್ಪಿಸಿಕೊಡುತ್ತದೆ; ಈ ಕಾರಣದಿಂದಾಗಿಯೇ ಶತ್ರುಗಳು ನಮ್ಮ ನಡುವೆ ಉದಾರವಾದ ಬೆಳೆಯುವುದನ್ನು ಪ್ರೋತ್ಸಾಹಿಸುತ್ತಾರೆ. ಈ ಕಾರಣಗಳಿಂದಾಗಿ ಕ್ರಾಂತಿಕಾರೀ ಸಂಘಟನೆಗಳಲ್ಲಿ ಉದಾರವಾದವನ್ನು ತೊಡೆದು ಹಾಕಬೇಕು.

ಕ್ರಿಯಾತ್ಮಕವಲ್ಲದ ಪ್ರಜ್ಞೆಯನ್ನು ಹೊಂದಿರುವ ಉದಾರವಾದವನ್ನು ಸೋಲಿಸಲು ಕಾರ್ಯ ಸಾಧ್ಯ ಪ್ರಜ್ಞೆಯನ್ನೊಳಗೊಂಡ ಮಾರ್ಕ್ಸ್‌ವಾದವನ್ನು ಬೆಳೆಸಿಕೊಳ್ಳೋಣ.

ಕಮ್ಯುನಿಸ್ಟರು ವಿಶಾಲ ಮನೋಭಾವವನ್ನು ಹೊಂದಿದವರಾಗಿರಬೇಕು. ಪ್ರಾಮಾಣಿಕತೆ ಹಾಗೂ ಉತ್ಸಾಹವನ್ನು ಹೊಂದಿದವರಾಗಿರಬೇಕು. ಕ್ರಾಂತಿಯ ಹಿತವನ್ನು ಸ್ವಂತ ಹಿತಕ್ಕಿಂತ ಮಿಗಿಲಾಗಿ ಭಾವಿಸಬೇಕು. ಸಂಘಟನೆಯ ಕಟ್ಟುಪಾಡುಗಳನ್ನು ಸಡಿಲಿಸುವುದರ ವಿರುದ್ಧ ತಪ್ಪಾದ ಧೋರಣೆಗಳ ವಿರುದ್ಧ ನಿರಂತರ ಹೋರಾಟ ನಡೆಸುತ್ತಿರಬೇಕು. ಈ ರೀತಿಯಲ್ಲಿ ಪಕ್ಷದ ಸಾಂಘಿಕ ಜೀವನವನ್ನು ಸ್ಥಿರಗೊಳಿಸಿ ಪಕ್ಷಕ್ಕೂ ವಿಶಾಲ ಜನ ಸಮೂಹಕ್ಕೂ ನಡುವಿನ ಸಂಬಂಧವನ್ನು ಬಲಪಡಿಸಬೇಕು. ಕಮ್ಯುನಿಸ್ಟರು ಒಬ್ಬ ವ್ಯಕ್ತಿಯ ಮೇಲಿನ ಕಳಕಳಿಗಿಂತ ಹೆಚ್ಚಾಗಿ ಪಕ್ಷದ ಮೇಲೂ ಜನತೆಯ ಮೇಲೂ ಹೆಚ್ಚಿನ ಕಳಕಳಿ ತೋರಿಸಬೇಕು ಈ ರೀತಿ ವರ್ತಿಸಿದಾಗ ಮಾತ್ರವೇ ಅವರನ್ನು ಕಮ್ಯುನಿಸ್ಟ್ ಎಂಬುದಾಗಿ ಪರಿಗಣಿಸಬೇಕಾಗುತ್ತದೆ.

ನಮ್ಮ ನಡುವೆ ಕೆಲವರು ಅನುಸರಿಸುವ ಉದಾರವಾದೀ ನೀತಿಯನ್ನು ಕಿತ್ತೆಸೆಯಲು, ವಿಶ್ವಾಸಾರ್ಹವಾದ ಪ್ರಾಮಾಣಿಕವಾದ, ದೃಢ ಮನಸ್ಸುಳ್ಳ ಕಮ್ಯುನಿಸ್ಟರೆಲ್ಲರೂ ಒಂದುಗೂಡಬೇಕಾಗಿದೆ. ನಮ್ಮ ಕರ್ತವ್ಯಗಳಲ್ಲಿ ಇದೂ ಒಂದು ಎಂಬುದನ್ನು ನೆನಪಿಟ್ಟುಕೊಳ್ಳಬೇಕಾಗಿದೆ.

ಮೂಲ: ಮಾವೋತ್ಸೆತುಂಗ್

ಅನುವಾದ : "ಉದಯ"

ಮರೆತೇನೆಂದರೆ ಮರೆಯಲಿ ಹ್ಯಾಂಗಾ ಮಾವೋ ತ್ಸೆ ತುಂಗ್

ಅಕ್ಟೋಬರ್ 1917 ರ ಕ್ರಾಂತಿಯ ನಂತರದಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಜಗತ್ತಿನಲ್ಲಿ ನಡೆದ ಕ್ರಾಂತಿಗಳಲ್ಲಿ ಚೀನಾ ಕ್ರಾಂತಿ ಅತ್ಯಧಿಕ ಮಹತ್ವವುಳ್ಳ ಕ್ರಾಂತಿ. ಇದರ ರೂವಾರಿ ಕಾ|| ಮಾವೋತ್ಸೆತುಂಗ್ ಎಂಬುದರಲ್ಲಿ ಎರಡು ಮಾತಿಲ್ಲ. ಇಷ್ಟು ಮಹತ್ವ ಪೂರ್ಣವಾದ ಕ್ರಾಂತಿಯನ್ನು ಸಾಧಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದ ಮಾವೋತ್ಸೆತುಂಗರ ಜೀವನವು ವಿವಿಧ ಮುಖಗಳಿಂದ ಕೂಡಿದ್ದು ವೈವಿಧ್ಯಮಯವೂ ಕುತೂಹಲಕಾರಿಯೂ ಎಲ್ಲಾ ಕ್ರಾಂತಿಕಾರಿಗಳಿಗೆ ಕೆಲವು ವಿಷಯಗಳಲ್ಲಿ ಮಾರ್ಗದರ್ಶನವೂ ಆಗಿರುತ್ತದೆ.

ಮಾವೋತ್ಸೆ ತುಂಗ್ ರವರು ಒಂದು ಕೆಳ ಮಧ್ಯಮ ರೈತ ಕುಟುಂಬದಲ್ಲಿ ಹುಟ್ಟಿದ್ದು ಬಾಲ್ಯವನ್ನು ಕಠಿಣ ಕೆಲಸದಲ್ಲಿ ಕಳೆದರು, ತನ್ನ ಕಠೋರ ಹೃದಯದ ತಂದೆಯ 'ಯಜಮಾನಿಕೆ'ಯ ವಿರುದ್ಧ ಬಾಲ್ಯದಲ್ಲೇ ಪ್ರತಿಭಟನೆ ಮಾಡಲು ಹಿಂಜರಿಯಲಿಲ್ಲ. ಹಳ್ಳಿಯ ಬಾಲಕನಾದರೂ ತನ್ನ ಬುದ್ಧಿವಂತಿಕೆಯ ಪರಿಣಾಮವಾಗಿ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಪಡೆದನು. ಆ ಸಂದರ್ಭದಲ್ಲಿ 1911 ರಲ್ಲಿ ನಡೆದ ರಾಷ್ಟ್ರೀಯ ಬಂಡಾಯದಲ್ಲಿ ದಂಗೆ ಕೋರನಾಗಿ ಭಾಗವಹಿಸಿದರು. 1919ರ ವಿದ್ಯಾರ್ಥಿಗಳ ಚಳುವಳಿಯಲ್ಲಿ ಸಕ್ರಿಯ ಭಾಗಿಯಾಗಿದ್ದರು ಆ ಹಿನ್ನೆಲೆಯಲ್ಲಿ ಸ್ಥಾಪಿಸಲ್ಪಟ್ಟ ಚೀನಿ ಕಮ್ಯೂನಿಸ್ಟ್ ಪಕ್ಷದ ಪ್ರಥಮ ಸಮ್ಮೇಳನದಲ್ಲಿ ಭಾಗಿಗಳಾದ 13 ಮಂದಿಯಲ್ಲಿ ಮಾವೋ ಕೂಡಾ ಒಬ್ಬರು.

ಅವರು ಕಮ್ಯೂನಿಸ್ಟ್ ಜೀವನವನ್ನು ಕಾರ್ಮಿಕರ ಟ್ರೇಡ್ ಯುನಿಯನುಗಳನ್ನು ಕಟ್ಟಿ, ಮುಷ್ಕರಗಳನ್ನು ನಡೆಸಿ ಕಾರ್ಮಿಕರ ಸಾಮಾಜಿಕ ಆರ್ಥಿಕ - ರಾಜಕೀಯ ಜಾಗೃತಿಯನ್ನು ಬೆಳೆಸುವುದರ ಮೂಲಕ ಆರಂಭ ಮಾಡಿದರು. ಒಮ್ಮೆ ಒಂದು ಮುಷ್ಕರದಲ್ಲಿ ತೀವ್ರ ಘರ್ಷಣೆಗಳುಂಟಾಗಿ ಅವರು ಆ ಸ್ಥಳದಿಂದ ದೂರ ತಲೆ ತಪ್ಪಿಸಿ ಓಡಬೇಕಾದ ಪರಿಸ್ಥಿತಿ ಉಂಟಾಯಿತು. ಆ ವೇಳೆಯನ್ನು ಅವರು ಒಂದು ವರ್ಷಕಾಲ ಜಗತ್ತಿನ ಎಲ್ಲಾ ವಿಷಯಗಳ ಮೇಲಿನ ಅತ್ಯುತ್ತಮ ಮತ್ತು ಮಹತ್ವದ ಗ್ರಂಥಗಳನ್ನು ಅಭ್ಯಸಿಸಿ ಮುಂದಿನ ಕ್ರಾಂತಿಕಾರಿ ಹೋರಾಟಗಳಿಗೆ ತನ್ನನ್ನು ತಾನು ಅಣಿ ಮಾಡಲು ಉಪಯೋಗಿಸಿಕೊಂಡರು.

ಸುಮಾರು ಅದೇ ಕಾಲದಲ್ಲಿ ಹೂನಾನ್ ಪ್ರಾಂತದಲ್ಲಿ ನಡೆದ "ರೈತರ ವಿಸ್ತೃತ ದಂಗೆಗಳ" ಕುರಿತು – ಎಲ್ಲಾ ಪತ್ರಿಕೆಗಳಲ್ಲಿ ಅತ್ಯಂತ ಅವಹೇಳನಕರ ಲೇಖನಗಳುಬರುತ್ತಿದ್ದಾಗ– ಚೀನಿ ಕಮ್ಯೂನಿಸ್ಟ್ ಪಕ್ಷದ ಆದೇಶದ ಮೇರೆಗೆ ' ಅಭ್ಯಸಿಸಲು ' ಹೋದರು. ಅಲ್ಲಿಗೆ ಹೋಗಿ ಬಂದ ಮಾವೋ ತ್ಸೆ ತುಂಗ್ ಅತುಳ ಅನುಭವದಿಂದ ಕೂಡಿ ಬೆಳೆದರು. ಕಾರ್ಮಿಕ ವರ್ಗದ ನೇತೃತ್ವದಲ್ಲಿ ಚೀನಾದಂತಹ ಕೃಷಿ ಪ್ರಧಾನವಾದ ದೇಶದ ರೈತರ ಶಕ್ತಿಯನ್ನು ಸಹಾಯಕವಾಗಿ ಪಡೆದುಕೊಳ್ಳಲು ಸಾಧ್ಯವಾದರೆ ಎಂತಹ ಕ್ರಾಂತಿಕಾರಿ ಬದಲಾವಣೆಯನ್ನೂ ಸಾಧಿಸಬಹುದೆಂಬುದೇ ಅವರು ಮೈಗೂಡಿಸಿಕೊಂಡ ಪಾಠ.

ಚೀನೀ ಕಮ್ಯೂನಿಸ್ಟ್ ಪಕ್ಷದ ಆದೇಶದಂತೆ ಕೊಮಿಂಟಾಂಗ್ ಪಕ್ಷದ ಸದಸ್ಯನೂ ಆಗಿ ಸನ್ ಯೆತ್ ಸೆನ್‌ರ ನೇತೃತ್ವದಲ್ಲಿ ಪ್ರಜಾಪ್ರಭುತ್ವ ಸರಕಾರದಲ್ಲಿ ಒಬ್ಬ ಪ್ರಮುಖ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ಸನ್‌ಯೆತ್ ಸೆನ್ ಸತ್ತು ಚಿಯಾಂಗ್ ಕೈ ಶೇಖ್‌ಗೆ ಅಧಿಕಾರ ಬಂದ ಎರಡನೇ ವರ್ಷಗಳಲ್ಲಿ 1927 ರಲ್ಲಿ ಒಮ್ಮಿಂದೊಮ್ಮೆಲೇ ಚೀನೀ ಕಮ್ಯೂನಿಸ್ಟ್ ಪಕ್ಷವನ್ನು ನಿಷೇಧಿಸಿ ಎಲ್ಲಾ ಕ್ರಾಂತಿಕಾರಿಗಳನ್ನು ಹುಟ್ಟಡಗಿಸಲು ಚಿಯಾಂಗ್ ಹೊರಟಾಗ, ಒಂದು ಸೈನ್ಯ ತುಕುಡಿಯನ್ನು

ಪಿ. ರಾಮಚಂದ್ರರಾವ್

ಹಿಡಿದುಕೊಂಡು ದಕ್ಷಿಣ ಚೀನಾದ ಭಾಗಗಳಿಗೆ ಓಡಿ ಹೋದರು. ಅಲ್ಲಿ ಅತ್ಯುನ್ನತ ಪರ್ವತ ಶಿಖರಗಳಲ್ಲಿ 'ನೆಲೆ'ಯನ್ನು ಸ್ಥಾಪಿಸಿ, ಮುಂದಕ್ಕೆ ಚೂ-ಟೆ ಬಂದು ಸೇರಿದಾಗ ಅವರಿಬ್ಬರೂ ರೈತ ಸೋವಿಯತ್‌ಗಳನ್ನು ಸ್ಥಾಪಿಸುವ ಮತ್ತು ಗೆರಿಲ್ಲಾ ಯುದ್ಧವನ್ನು ನಡೆಸಲು ಉಪಕ್ರಮಿಸಿದರು.

1932-35 ರಲ್ಲಿ ಚಿಯಾಂಗ್‌ಕೈ ಶೇಖ್‌ರು ಕಮ್ಯೂನಿಸ್ಟರನ್ನು ಸುತ್ತುವರಿದು ನಾಶಮಾಡಲು ಮಿಲಿಯಾಂತರ ಸೈನಿಕ ದಳಗಳನ್ನು ಕಳುಹಿಸಿದಾಗ ಅವುಗಳನ್ನು ಹಲವು ಸುತ್ತುಗಳಲ್ಲಿ ಸೋಲಿಸಿ, ಕೊನೆಗೆ ಜಪಾನ್ ಚೈನಾವನ್ನು ಕಬಳಿಸಿ ಮುಂದುವರಿಯುತ್ತಿರುವ ಸನ್ನಿವೇಶದಲ್ಲಿ ಚಿಯಾಂಗ್ ಕೈ ಶೇಖ್‌ನ ನೇತೃತ್ವದಲ್ಲಿ ಬಂಡವಾಳಶಾಹಿ-ಭೂಮಾಲೀಕರುಗಳು 'ರಾಷ್ಟ್ರವನ್ನು ರಕ್ಷಿಸಲು ಕ್ರಮ ತೆಗೆದುಕೊಳ್ಳದಿರುವಾಗ, ಮಾವೋತ್ಸೆತುಂಗ್‌ರು ಜಪಾನ್ – ವಿರೋಧಿ ರಾಷ್ಟ್ರೀಯ ವಿಮೋಚನಾರಂಗ'ವನ್ನು ಕಟ್ಟಿ ಜಪಾನೀ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟದ ಕಾರ್ಯಕ್ರಮವೊಂದನ್ನು ರಾಷ್ಟ್ರದ ಎದುರು ತಮ್ಮ ಪಕ್ಷದ ಪರವಾಗಿ ಇಟ್ಟರು. ಚಿಯಾಂಗ್‌ರ ಸೈನಿಕ ದಿಗ್ಬಂಧನವನ್ನೂ ತಪ್ಪಿಸಿ 8000 ಮೈಲಿ ಉತ್ತರಕ್ಕೆ ಸೈನ್ಯ ನಡೆಸಿ "ಯೆನಾನ್"ನಲ್ಲಿ ತಮ್ಮ ಕೇಂದ್ರವನ್ನು ಸ್ಥಾಪಿಸಿದರು.

ರಾಷ್ಟ್ರೀಯ ವಿಮೋಚನಾ ಹೋರಾಟದ ಕೇಂದ್ರವಾಯಿತು. ಯೆನಾನ್ ರಾಷ್ಟ್ರಪ್ರೇಮಿ ಸಮರ ಧೀರ ಪಕ್ಷವಾಗಿ ಬೆಳೆಯಿತು. ಚೀನೀ ಕಮ್ಯೂನಿಸ್ಟ್ ಪಕ್ಷ ರಾಷ್ಟ್ರೀಯ ಅಪ್ರತಿಮ ಮುಂದಾಳಾಗಿ ಬೆಳೆದರು ಮಾವೋತ್ಸೆ ತುಂಗ್.

1945ರಲ್ಲಿ ಯುದ್ಧ ಮುಗಿದಾಗ "ಸಂಯುಕ್ತ ರಾಷ್ಟ್ರೀಯ ರಂಗದ ಸರಕಾರ"ಕ್ಕಾಗಿಸೂಚನೆಗಳನ್ನು ಮಾವೋ ಪಕ್ಷದ ಮುಂದಿಟ್ಟರು. ಈ ಸೂಚನೆಯನ್ನು ಮುರಿದು 'ಅಂತರ್ಯುದ್ಧ'ವನ್ನು ಚಿಯಾಂಗರು ಅಮೇರಿಕನ್ ಸಾಮ್ರಾಜ್ಯಶಾಹಿಗಳ ನೇರ ಬೆಂಬಲದಿಂದ ಶುರುಮಾಡಿದಾಗಗೆರಿಲ್ಲಾ ಸೈನ್ಯಗಳು ಮುಂದಕ್ಕೆ ಯುದ್ಧ ಸೈನಿಕರಾಗಿ ಪರಿವರ್ತನೆಗೊಂಡು ಚೀನಾವನ್ನು ವಿಮೋಚನೆಗೊಳಿಸಲಾಯಿತು. ಗೆರಿಲ್ಲಾ ಯುದ್ಧದ ತಂತ್ರಗಳನ್ನು ರೂಪಿಸುವವರೂ, ಕೊನೆಯ ಹಂತದ ನೇರ ಯುದ್ಧಗಳನ್ನು ನಡೆಸುವುದರಲ್ಲಾಗಲೀ ಮಾವೋ ತ್ಸೆ. ತುಂಗರದು ಎತ್ತಿದಕೈ.

1949ರ ಅಕ್ಟೋಬರ್ 1 ರಂದು ಚೀನೀ ಜನತಾ ಪ್ರಜಾಪ್ರಭುತ್ವ ಸರಕಾರ ಸ್ಥಾಪನೆಯಾಯಿತು. ಜನತಾ ಪ್ರಜಾಪ್ರಭುತ್ವವನ್ನು ಸಂಪೂರ್ಣಗೊಳಿಸಲು ಕೃಷಿ ಮತ್ತು ಕೈಗಾರಿಕೆಗಳನ್ನು ಸಮುದಾಯಿಕ ಘಟಕಗಳಾಗಿ ಪರಿವರ್ತಿಸಿ ಸಮಾಜವಾದದತ್ತ ಹಾಗೂ ಚೀನಾ ಹೋಗುವಂತೆ ಮಾಡಿದರು ಮಾವೋ ತ್ಸೆ ತುಂಗ್, ಬಡತನವನ್ನುಸಂಪೂರ್ಣವಾಗಿ ಹೇಳ ಹೆಸರಿಲ್ಲದಂತೆ ಮಾಡಿದರು.

ಆದರೆ ಕೊನೆಯ ದಶಕದಲ್ಲಿ "ದುಷ್ಟ ಚತುಷ್ಟರ" ಬಲೆಗೆಬಿದ್ದು ಸಾಂಸ್ಕೃತಿಕ ಕ್ರಾಂತಿಗೆ ಮಾವೋ ಪ್ರೋತ್ಸಾಹ ಕೊಡುವಂತಾಗಿ ಚೀನಾದ ಬೆಳವಣಿಗೆಯ ಹಾದಿಯಲ್ಲಿ ಅಡ್ಡಿವುಂಟುಮಾಡುವಂತಾಯಿತು. ಪಕ್ಷದ ಪಾಳೆಯಗಾರಿ ಮೌಲ್ಯಗಳು ಅವರನ್ನು ದಾರಿ ತಪ್ಪಿಸಿದವು.

ಅದೇನೇ ಇದ್ದರೂ, ಒಟ್ಟಿನಲ್ಲಿ ಮಾವೋತ್ಸೆತುಂಗ್‌ರ ವ್ಯಕ್ತಿತ್ವ ಮತ್ತು ಕ್ರಾಂತಿಕಾರಿ ಪಾತ್ರ ಬಹಳ ಶ್ರೇಷ್ಠ ಎಂಬುದರಲ್ಲಿ ಎರಡು ಮಾತಿಲ್ಲ

ಮಾರ್ಕ್ಸ್‌ವಾದ ಕೇವಲ ಯೂರೋಪಿಯನ್ ಮಣ್ಣಿಗೆ ಮಾತ್ರ ಹಿಡಿಯುವ ತತ್ವವಲ್ಲ, ಏಶ್ಯಾದ ಮಣ್ಣಿನಲ್ಲಿ ಅದು ಸಮೃದ್ಧವಾಗಿ ಬೆಳೆಯಬಲ್ಲದು ಎಂದು ಮಾವೋತ್ಸೆತುಂಗ್‌ರು ತೋರಿಸಿಕೊಟ್ಟು ಮಹಾ ಕಾರ್ಯ ಸಾಧನೆ ಮಾಡಿದ್ದಾರೆ........

ಎಸ್ ಎಫ್ ಐ - ಡಿ ವೈ ಎಫ್ ಐ ಕರೆ

ಭಾರತ ವಿದ್ಯಾರ್ಥಿ ಫೆಡರೇಷನ್, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್. ಕರ್ನಾಟಕ ರಾಜ್ಯ ಸಮಿತಿಗಳ ಕರೆಯಂತೆ ಸೆಪ್ಟೆಂಬರ್ 17 ರಂದು ಕರ್ನಾಟಕ ರಾಜ್ಯದಾದ್ಯಂತ್ಯ ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ ಕಾರ್ಯಕ್ರಮವನ್ನು ಜಾರಿಗೊಳಿಸಲು ಕರೆ ನೀಡಿವೆ. ಎಲ್ಲಾ ಜಿಲ್ಲಾ ಮತ್ತು ತಾಲೋಕು ಕೇಂದ್ರಗಳಲ್ಲಿ ಜಿಲ್ಲಾಧಿಕಾರಿ ತಾಹಶೀಲ್ದಾರ್ ಕಛೇರಿಗಳಿಗೆ ಮೆರವಣಿಗೆ ನಡೆಸಿ ಮತ ಪ್ರದರ್ಶನ ಸಾಮೂಹಿಕ ಧರಣಿ ಕಾರ್ಯಕ್ರಮ ರೂಪಿಸಿ ಉದ್ಯೋಗದ ಹಕ್ಕು, ಮೊತಫ ಶಿಕ್ಷಣಫೀತಿ ವಾಪಸಾತಿ, ಡೊನೇಷನ್ ಕ್ಯಾಪಿಟೇಶನ್ ರದ್ಧತಿ. ಕರ್ನಾಟಕ ರಾಜ್ಯಅಭಿವೃಧಿ ಯೋಜನೆಗಳ ಜಾರಿ, ಕರ್ನಾಟಕ ಶಿಕ್ಷಣ ಮಸೂದೆಗೆ ರಾಷ್ಟ್ರಪತಿಗಳ ಅಂಗೀಕಾರ, ಹಾಸ್ಟೆಲ್ ಸೌಲಭ್ಯ, ಹೋಟೆಲ್, ಸಿನಿಮಾ, ದರ ಏರಿಕೆ ತಡೆಗಟ್ಟಬೇಕು ಮುಂತಾದ ಬೇಡಿಕೆಗಳೊಂದಿಗೆ ಸ್ಥಳೀಯ ಸಮಸ್ಯೆಗಳನ್ನು ಒಳಗೊಂಡ ಮನವಿಪತ್ರವನ್ನು ಅರ್ಪಿಸಲಾಗುವುದು. ಗೋಡೆಬರಹ, ಕರಪತ್ರ, ಪತ್ರಿಕಾ ಪ್ರಚಾರ ಕೈಬರಹದ ಭಿತ್ತಿಪತ್ರಗಳ ಮೂಲಕ ವ್ಯಾಪಕ ಪ್ರಚಾರ ನಡೆಸಲಾಗವುದು.

ಸೆಪ್ಟೆಂಬರ್ 29 ರಂದು ಕರ್ನಾಟಕ ಪ್ರಾಂತ. ರೈತ ಸಂಘ ಸಂಘಟಿಸಿರುವ ರಾಜ್ಯ ಮಟ್ಟದ "ವಿಧಾನ ಸೌಧ ಚಲೋ" ಕಾರ್ಯ ಕ್ರಮ ಯಶಸ್ವಿಗೊಳಿಸಲು ತನ್ನ ಎಲ್ಲಾ ಘಟಕಗಳ ಶ್ರಮಿಸಲು ಹಾಗೂ ಕೇರಳದ ಉದ್ಯೋಗ ಅಥಾವ ನಿರುದ್ಯೋಗ ಭತ್ಯೆಗೆ ಒತ್ತಾಯಿಸಿ ಹೋರಾಟ ನಡೆಸುತ್ತಿರುವ ಡಿ. ವೈ. ಎಫ್. ಐ. ಕಾರ್ಯ ಕರ್ತರ ಮೇಲೆ ಕರುಣಾಕರನ್ ಸರ್ಕಾರ ನಡೆಸುತ್ತಿರುವ ಅಮಾನುಷ ದಬ್ಬಾಳಿಕೆ ಗೋಲಿಬಾರ್ ಖಂಡಿಸಿ ಪ್ರತಿಭಟನಾ ಕಾರ್ಯಕ್ರಮವನ್ನು ನಡೆಸಲು ಕೇರಳ ಮಂತ್ರಿಗಳು ಕರ್ನಾಟಕ ಪ್ರವಾಸಕ್ಕೆ ಬಂದಾಗ ಘೇರಾವೋನಡೆಸಲು ಕರೆ ನಿಡಲಾಗದೆ.

ಗುಲ್ಬರ್ಗಾ ವಿ.ವಿ. ಹೊಸ ಪರೀಕ್ಷಾ ನೀತಿಗೆ ಪ್ರತಿಭಟನೆ

ಗುಲ್ಬರ್ಗಾ ವಿಶ್ವವಿದ್ಯಾಲಯವು ಬಿ. ಎಸ್ಸಿ. ವಿದ್ಯಾರ್ಥಿಗಳಿಗೆ ಥಿಯರಿ ಮತ್ತು ಪ್ರಾಕ್ಟಿಕಲ್ಸ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ದಿಢೀರನೆ ಪ್ರಕಟಿಸಿರುವ ಹೊಸ ನೀತಿಯನ್ನು ಕೂಡಲೇ ವಾಪಸು ಪಡೆದು ಮೊದಲಿನ ಕ್ರಮವನ್ನೇ ಮುಂದುವರಿಸಬೇಕೆಂದು ಎಸ್. ಎಫ್ ಐ. ಒತ್ತಾಯಪಡಿಸಿದೆ.

ಥಿಯರಿ ಮತ್ತು ಪ್ರಾಕ್ಟಿಕಲ್ಸ್ ಪರೀಕ್ಷೆಗಳನ್ನು ಬೇರ್ಪಡಿಸಿ ಇವುಗಳಲ್ಲಿ ಯಾವುದಾದರೊಂದರಲ್ಲಿ ನಿಗದಿಪಡಿಸಿದ ಅಂಶಕ್ಕಿಂತ ಕಡಿಮೆ ಪಡೆದು ಫೇಲ್ ಆದರೆ ಪುನಃ ಎರಡೂ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕೆಂಬುದು ವಿಶ್ವವಿದ್ಯಾನಿಲಯದ ಹೊಸ ನೀತಿಯಾಗಿದೆ. ಈ ಕ್ರಮವು ವಿದ್ಯಾರ್ಥಿಗಳ ಮೇಲೆ ಹೊರೆಯಾಗುವುದಲ್ಲದೆ ಕಿರುಕುಳದಾಯಕವಾಗಿರುವುದರಿಂದ ಈ ಹೊಸ ನೀತಿಯನ್ನು ವಿಶ್ವವಿದ್ಯಾಲಯ ಹಿಂತೆಗೆದುಕೊಳ್ಳಬೇಕೆಂದು ಎಸ್. ಎಫ್. ಐ. ನ ಬಳ್ಳಾರಿ ಜಿಲ್ಲಾ ಸಮಿತಿ ಅಧ್ಯಕ್ಷ ಎಸ್. ಪ್ರಸನ್ನಕುಮಾರ್ ಮತ್ತು ಕಾರ್ಯದರ್ಶಿ ಎಸ್. ವೈ. ಗುರುಶಾಂತ್ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಕಾಫಿ ಕ್ಯೂರಿಂಗ್ ಕಾರ್ಮಿಕರ ಮುಷ್ಕರ

ಉಚ್ಚ ನ್ಯಾಯಾಲಯದ ಆದೇಶದಂತೆ ಪುನರ್ ವಿಮರ್ಶಿತ ಕನಿಷ್ಠ ಕೂಲಿ ಮತ್ತು ತುಟ್ಟಿ ಭತ್ಯೆಯನ್ನು 1-4-1985 ರಿಂದ ಪೂರ್ವಾನ್ವಯವಾಗುವಂತೆ ನಿಗದಿ ಆಗಿದ್ದು, ತುಟ್ಟಿ ಭತ್ಯೆ ಬಳಕೆದಾರರ ಬೆಲೆ ಸೂಚ್ಯಂಕ 470 ಅಂಶಗಳ ಮೇಲೆ ಹೆಚ್ಚಾದ ಪ್ರತಿ ಅಂಶಕ್ಕೆ 2 ಪೈಸೆಯಂತೆ ದಿನಕ್ಕೆ 10 ರೂಪಾಯಿ ಕೂಲಿ ಪಡೆಯುವವರಿಗೂ, ಎರಡೂವರೆ ಪೈಸೆಯಂತೆ ರೂ. 15 ಕೂಲಿ ಪಡೆಯುವವರಿಗೂ ಮತ್ತು 15 ರೂಪಾಯಿಗಿಂತ ಹೆಚ್ಚಾಗಿ ಕೂಲಿ ಪಡೆಯುವವರಿಗೆ 3 ಪೈಸೆ ದೊರೆಯಬೇಕು. ಈ ಪ್ರಕಟನೆಯ ಪ್ರಕಾರ ಕಾಫಿ ಕ್ಯೂರಿಂಗ್ ಮಾಲೀಕರು ಲಕ್ಷಾಂತರ ರೂಪಾಯಿ ಬಾಕಿಯಾಗಿ ಕೊಡಬೇಕಾಗಿದೆ. ಆದರೆ ಅದನ್ನು ತಪ್ಪಿಸಿಕೊಳ್ಳಲು ಮಾಲೀಕರುಗಳು ಉಚ್ಚ ನ್ಯಾಯಾಲಯದ ಪೂರ್ಣಪೀಠದ ತಡೆಯಾಜ್ಞೆ ತರಲು ಪ್ರಯತ್ನಿಸುತ್ತಿರುವುದನ್ನು ಪ್ರತಿಭಟಿಸಿ ಹಾಸನ ಜಿಲ್ಲೆಯಲ್ಲಿರುವ "ಹಾಸನ ಕಾಫಿ ಕ್ಯೂರಿಂಗ್ ವರ್ಕ್ಸ್", ಭಾರತಿ ಕಾಫಿ ಕ್ಯೂರಿಂಗ್ ವರ್ಕ್ಸ್, ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ವರ್ಕ್ಸ್ ಮತ್ತು ಲಕ್ಷ್ಮಿ ಕಾಫಿ ಕ್ಯೂರಿಂಗ್ ವರ್ಕ್ಸ್‌ಗಳ ಕಾರ್ಮಿಕರು ಇತ್ತೀಚೆಗೆ ಸಾಂಕೇತಿಕ ಮುಷ್ಕರ ನಡೆಸಿದರು. ಸುಮಾರು 500 ಮಹಿಳೆಯರು ಹಾಸನದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಉಪ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಯವರ ಕಛೇರಿಯ ಎದುರು ಮತ ಪ್ರದರ್ಶನ ಮತ್ತು ಧರಣಿ ನಡೆಸಿದರು. ಮೇಲ್ಕಂಡ ಅಧಿಕಾರಿಗಳು ಕೂಡಲೇ ಸರ್ಕಾರದಿಂದ ಮಾಹಿತಿ ಪಡೆದು ಮುಂದಿನ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದ ನಂತರ ಪ್ರದರ್ಶನ ಕೊನೆಗೊಂಡಿತೆಂದು ಸಂಘದ ಪ್ರಧಾನ ಕಾರ್ಯದರ್ಶಿ ವಿ. ಸುಕುಮಾರ್ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಶಿರಸಿಯಲ್ಲಿ ರಿಕ್ಷಾ ಚಾಲಕರ ಮೆರವಣಿಗೆ

ಕರ್ನಾಟಕ ರಾಜ್ಯ ಆಟೋ ರಿಕ್ಷಾ ಚಾಲಕರ ಸಂಘಟನಾ ಸಮಿತಿಯ ಕರೆಯ ಮೇರೆಗೆ ಶಿರಸಿಯಲ್ಲಿ ರಿಕ್ಷಾ ಚಾಲಕರು ಮತ್ತು ಮಾಲಿಕರು ಆಟೋ ರಿಕ್ಷಾ ಮುಷ್ಕರ ನಡೆಸಿ ಮೆರವಣಿಗೆ ನಡೆಸಿದ ಬಗ್ಗೆ ವರದಿಯಾಗಿದೆ. ಸುಮಾರು 350 ಮಂದಿ ರಿಕ್ಷಾ ಚಾಲಕರು ಪಿ. ಜಿ. ಮಶಾಲ್ದಿ ಅವರ ನೇತೃತ್ವದಲ್ಲಿ ಮೆರವಣಿಗೆ ನಡೆಸಿ ಅಸಿಸ್ಟೆಂಟ್ ಕಮಿಷನರ್‌ರವರ ಕಚೇರಿಗೆ ತೆರಳಿ ರಿಕ್ಷಾ ಚಾಲಕರ ಬೇಡಿಕೆಗಳನ್ನೊಳಗೊಂಡ ಮನವಿ ಅರ್ಪಿಸಿದರು. ನಂತರ ಡಿ. ವೈ. ಎಸ್. ಪಿ. ಯವರ ಕಚೇರಿಗೆ ತೆರಳಿ ಪೋಲಿಸರಿಂದ ಆಗುತ್ತಿರುವ ಕಿರುಕುಳದ ಬಗ್ಗೆ, ಮತ್ತು ರಿಕ್ಷಾ ಸ್ಟ್ಯಾಂಡಿನ ಅವಶ್ಯಕತೆಯ ಬಗ್ಗೆ ಅವರೊಂದಿಗೆ ಚರ್ಚಿಸಲಾಯಿತೆಂದು ವರದಿ ತಿಳಿಸಿದೆ.

ಸಂತಾಪ

ಪಾವೂರಿನಲ್ಲಿ ಸಿ. ಪಿ. ಐ. (ಎಂ)ನ ಕಾರ್ಯಕರ್ತರಾಗಿದ್ದ ಕಾ. ಪಾವೂರು ಶೀನಪ್ಪ ಅವರು ಅಗಸ್ಟ್ 27 ರಂದು ತೀರಿಕೊಂಡರು. ಅವರಿಗೆ 65 ವರ್ಷ ವಯಸ್ಸಾಗಿತ್ತು 1962 ರಿಂದ ಪಕ್ಷದಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದ ಅವರ ನಿಧನದಿಂದಾಗಿ ಪಕ್ಷಕ್ಕೆ ಅಪಾರ ನಷ್ಟವಾಗಿದೆಯೆಂದು ಸಿ.ಪಿ.ಐ (ಎಂ)ನ ಪಾವೂರು ಶಾಖೆ ತನ್ನ ಸಂತಾಪ ಸೂಚನೆಯಲ್ಲಿ ತಿಳಿಸಿದೆ. ಮೃತರ ಕುಟುಂಬ ವರ್ಗದ ದುಃಖದಲ್ಲಿ ತಾನೂ ಸಹಭಾಗಿಯಾಗಿರುವುದಾಗಿ ತಿಳಿಸಿದೆ.

ತುಮಕೂರು :

ಆಟೋ ಚಾಲಕರ ಸಂಘದ ನೂತನ ಸಮಿತಿ

ತುಮಕೂರು ಆಟೋ ಚಾಲಕರ ಸಂಘದ 1986-87ನೇ ಸಾಲಿನ ಸರ್ವ ಸದಸ್ಯರ ಸಭೆಯು ಆಟೋ ಚಾಲಕರ ಸಂಘದ ಅಧ್ಯಕ್ಷರಾದ ಶ್ರೀ ಜೈಕರ್‌ರವರ ಅಧ್ಯಕ್ಷತೆಯಲ್ಲಿ ನಡೆದು ಸರ್ವಾನುಮತದಿಂದ ಕೆಳಕಂಡ ನೂತನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯ್ತು.

ಗೌರವ ಅಧ್ಯಕ್ಷರಾಗಿ : ಬಿ.ವಿ ಶ್ರೀನಿವಾಸರಾಜು

ಅಧ್ಯಕ್ಷರು . ಟಿ.ಸಿ. ಬಸವರಾಜು

ಉಪಾಧ್ಯಕ್ಷರುಗಳಾಗಿ : ಬಿ ಗೌಸ್, ಎಂ.ಆರ್. ಸಾವಂತ್ ಕುಮಾರ್

ಪ್ರಧಾನ ಕಾರ್ಯದರ್ಶಿ : ಎಂ. ಎಃ. ಚೆಲುವರಾಜ್

ಕಾರ್ಯದರ್ಶಿಗಳಾಗಿ : ರಾಮಚಂದ್ರ ಅಯ್ಯರ್, ಲಕ್ಷ್ಮಣ್, ಜಾಬೀರ್.

ಖಜಾಂಚಿ : ಮೋಹನಚಂದ್ರ ಬಾಬು.

ಕಾನೂನು ಸಲಹೆಗಾರರು : ಟಿ ಪಿ. ನಟರಾಜು ಹಾಗೂ 31 ಜನ ಕಾರ್ಯಕಾರಿ ಸಮಿತಿ ಸದಸ್ಯರುಗಳು ಆಯ್ಕೆಯಾಗಿದ್ದಾರೆ.

ಇದೇ ದಿನ ಸಂಘವು ಕಬ್ಬಿಣದ ರಸ್ತೆ ಸಿಡಿಯುವಿಕೆಯಿಂದ ಅಪಘಾತಕ್ಕೊಳಪಟ್ಟ ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿ ಮಕ್ಕಳಿಗೆ ಹಣ್ಣು ಹಂಚುವುದರ ಮೂಲಕ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ.

ಡಿ. ವೈ. ಎಫ್. ಐ. ಚಟುವಟಿಕೆಗಳು

ದ. ಕ. ಜಿಲ್ಲಾ ಪ್ರಥಮ ಅಧಿವೇಶನ

24-8-1986 ರಂದು ಮಂಗಳೂರಿನಲ್ಲಿ ದ. ಕ. ಜಿಲ್ಲಾ ಮಟ್ಟದ ಡಿ. ವೈ. ಎಫ್. ಐ ಅಧಿವೇಶನ ನಡೆಯಿತು. ಜಿಲ್ಲೆಯ ಎಲ್ಲಾ ತಾಲ್ಲೂಕ್‌ಗಳಿಂದ ಇನ್ನೂರು ಜನ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು

ರಾಜ್ಯ ಸಮಿತಿಯ ಅಧ್ಯಕ್ಷ ಮಹಾಬಲ ವಡೇರ ಹೋಬಳಿ ಅವರು ಧ್ವಜಾರೋಹಣ ಮಾಡಿದರು. ರಾಜ್ಯ ಸಮಿತಿಯ ಕಾರ್ಯದರ್ಶಿ ಎಸ್ ಶಿವರಾಂ ರವರು ಉದ್ಘಾಟಿಸುತ್ತ ಭೂಮಾಲೀಕ, ಬಂಡವಾಳಶಾಹಿ ಪರವಾದ ಕೇಂದ್ರದ ಹೊಸ ಶಿಕ್ಷಣ ನೀತಿಯನ್ನು ಖಂಡತುಂಡವಾಗಿ ವಿರೋಧಿಸಬೇಕೆಂದು ಕರೆ ನೀಡಿದರು.

ಅಧ್ಯಕ್ಷ ಮಂಡಳಿಗೆ ಬಿ- ಮಾಧವ, ಬಿ.ಎಂ. ಮಾಧವ ಹಾಗೂ ಕೆ ಶಂಕರ್ ಇವರುಗಳನ್ನು ಸಮಾವೇಶ ಆಯ್ಕೆ ಮಾಡಿತು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿ. ಪಿ. ಐ. (ಎಂ)ನ ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರ ರಾವ್‌ರವರು ಮಾತನಾಡುತ್ತ ಯುವಜನರು ಉದ್ಯೋಗದ ಹಕ್ಕು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಸೇರಿಸಲು ಸಂಘಟಿತ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ವಿಚಾರವಾದಿ ಸಂಘದ ನಾಯಕ ನರೇಂದ್ರ ನಾಯಕ್‌ರವರು ಮಾತನಾಡುತ್ತ ಯುವಜನರು ವೈಚಾರಿಕ ಮನೋಭಾವನೆ ಬೆಳೆಸಿಕೊಳ್ಳಬೇಕೆಂದು ಹೇಳಿದರು. ಕರ್ನಾಟಕ ಪ್ರಾಂತ ರೈತ ಸಂಘದ ಪರವಾಗಿ ಜನಾರ್ಧನ್ ನಾಯಕ್, ಅಬ್ರಹಾಂ ಕಾರ್ಕಡ, ಎಸ್.ಎಫ್.ಐ. ಪರವಾಗಿ ಕೆ. ವಿಶ್ವನಾಥ್ ಇವರುಗಳು ಶುಭ ಕೋರಿ ಮಾತನಾಡಿದರು.

ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಸುಮಾರು ಹತ್ತು ಜನ ಪ್ರತಿನಿಧಿಗಳು ಮಾತನಾಡಿದ ನಂತರ ವರದಿಯು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಮಂಗಳೂರು ಶೈಲಾಗಾರ, ಕೊಂಕಣ ರೈಲ್ವೇಗಳನ್ನು ಸ್ಥಾಪಿಸಲು, ಕೇರಳದಲ್ಲಿ ನಿರುದ್ಯೋಗ ವಿರೋಧಿ ಚಳುವಳಿ ನಡೆಸುತ್ತಿರುವ ಡಿ. ವೈ. ಎಫ್. ಐ ನ ಸಾವಿರಾರು ಕಾರ್ಯಕರ್ತರ ಮೇಲೆ ನಡೆದಿರುವ ಪೋಲೀಸ್ ದಬ್ಬಾಳಿಕೆಗಳನ್ನು ಖಂಡಿಸುವ, ಹೋಟೆಲ್, ಸಿನೇಮಾ ದರಗಳನ್ನು ಇಳಿಸಲು ಸಮಾವೇಶವು ನಿರ್ಣಯಗಳನ್ನು ಅಂಗೀಕರಿಸಿತು.

ಬಿ ಎಂ. ಮಾಧವ ಅಧ್ಯಕ್ಷ ಜೆ ಸದಾಶಿವ ಶೆಟ್ಟಿ ಮತ್ತು ವಿಶ್ವನಾಥ್ ಉಪಾಧ್ಯಕ್ಷರುಗಳಾಗಿ, ನಾಗೇಶ್ ಕುಮಾರ್ ಕಾರ್ಯದರ್ಶಿ ಸಹಕಾರ್ಯದರ್ಶಿಗಳಾಗಿ ಶಂಕರ ಖಾವಿರ, ರಮೇಶ್ ಉಳ್ಳಾಲ್, ಕೋಶಾಧಿಕಾರಿಯಾಗಿ ಗೋವಿಂದ ಹಾಗೂ ಏಳು ಮಂದಿ ಜಿಲ್ಲಾ ಸಮಿತಿಯ ಸದಸ್ಯರನ್ನು ಆರಿಸಲಾಯಿತು.

ರಾಷ್ಟ್ರೀಯ ಐಕ್ಯತಾ ದಿನಾಚರಣೆ

ಡಿ.ವೈ.ಎಫ್.ಐ. ಉಳ್ಳಾಲ ವಲಯ ಸಮಿತಿ ಆಶ್ರಯದಲ್ಲಿ 15-9-86 ಉಳ್ಳಾಲದಲ್ಲಿ ರಾಷ್ಟ್ರೀಯ ಐಕ್ಯತಾ ದಿನಾಚರಣೆ ರಮೇಶ್ ಉಳ್ಳಾಲ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು ಅತಿಥಿಗಳಾಗಿ ವಾಸುದೇವ್ ಉಚ್ಚಿಲ್ ಮತ್ತು ಬಿ. ಮಾಧವ ತಮ್ಮ ಭಾಷಣದಲ್ಲಿ ದೇಶದಲ್ಲಿ ಇಂದು ವಿಚ್ಛಿದ್ರಕಾರಿಶಕ್ತಿಗಳು ಜಾತಿ, ಭಾಷೆ, ಧರ್ಮ ಹಾಗೂ ಪ್ರಾಂತ್ಯಗಳ ಆಧಾರದಲ್ಲಿ ಪ್ರತ್ಯೇಕತಾವಾದಿ ಚಳುವಳಿಗಳನ್ನು ನಡೆಸುತ್ತಿರುವುದನ್ನು ಖಂಡಿಸಿದರು ಈ ಶಕ್ತಿಗಳು ಜನರಲ್ಲಿ ಕೋಮು ಭಾವನೆಗಳನ್ನು ಕೆರಳಿಸಿ ಅನೈಕ್ಯತೆಯ ಬೀಜ ಬಿತ್ತುತ್ತಿದೆ. ಪಂಜಾಬ್, ಮಿಜೋರಾಂ, ಜಮ್ಮು ಕಾಶ್ಮೀರ, ಗೂರ್ಖಾಲಾಂಡ್ ಇತ್ಯಾದಿ ಚಳುವಳಿಗಳನ್ನು ಉದಾಹರಿಸಿ ಈ ಎಲ್ಲಾ ಚಳುವಳಿಗಳಿಗೆ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಬೆಂಬಲವಿರುವುದನ್ನು ಸ್ಪಷ್ಟ ಪಡಿಸಿದರು. ಕೇಂದ್ರ ಸರಕಾರ ಈ ಚಳುವಳಿಗಳನ್ನು ಎದುರಿಸುವ ಬದಲು ಪ್ರತ್ಯೇಕತಾವಾದಿಗಳೊಂದಿಗೆ ರಾಜಿ ಮನೋಭಾವವನ್ನು ತಾಳಿರುವುದನ್ನು ಉಗ್ರವಾಗಿ ಖಂಡಿಸಿದರು ಯುವಜನರು ತಮ್ಮ ಮೂಲಭೂತ ಸಮಸ್ಯೆಗಳಾದ ನಿರುದ್ಯೋಗ, ಅನಕ್ಷರತೆ ಮೂಢ ನಂಬಿಕೆ, ವರ ದಕ್ಷಿಣೆಗಳಂತ ಸಮಸ್ಯೆಗಳ ವಿರುದ್ಧ ಸಂಘಟಿತರಾಗಿ ಹೋರಾಟ ನಡೆಸಬೇಕೆಂದೂ ಈ ಮೂಲಕ ದೇಶದ ಐಕ್ಯತೆಯನ್ನು ಕಾಪಾಡಬೇಕೆಂದು ಕರೆ ನೀಡಿದರು.

ಪ್ರಾರಂಭದಲ್ಲಿ ಯು. ಕೆ. ಪೂವಪ್ಪ ಸ್ವಾಗತಿಸಿ, ಕೊನೆಗೆ ಶ್ರೀ ಯು. ಬಿ. ನಾರಾಯಣ ವಂದಿಸಿದರು.

ವಿಚಾರ ಗೋಷ್ಠಿ

ಆಗಸ್ಟ್ 15 ರಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಆಶ್ರಯದಲ್ಲಿ ಬಸ್ರೂರಿನ ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ಉಪನ್ಯಾಸಕರಾದ ಶ್ರೀಯುತ ಭಾಸ್ಕರ ಮೈಯ್ಯರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆ ಬಗ್ಗೆ ವಿಚಾರ ಗೋಷ್ಠಿ ನಡೆಯಿತು. ಕುಂದಾಪುರದ ಡಿ ವೈ. ಎಫ್ ಐ ನ ಶಂಕರ ಖಾರ್ವಿಯವರು ಪ್ರಬಂಧವನ್ನು ಮಂಡಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ಉಪನ್ಯಾಸಕರಾದ ಶ್ರೀಯುತ ಮಂಜನಾಥ. ಡಿ ವೈ ಎಫ್. ಐ ಅಧ್ಯಕ್ಷರಾದ ಎಡೇಯರ ಹೋಬಳಿ ಮೊದಲಾದವರು ಮಾತನಾಡಿದರು.

ಸರ್ವ ಸದಸ್ಯರ ಸಭೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ ವೈ ಎಫ್ ಐ) ವಾಮಂಜೂರು ವಲಯದ ಸರ್ವ ಸದಸ್ಯರ ಸಭೆಯು 17-8-86ರಂದು ಬೀಡಿ ಕೆಲಸಗಾರರ ಮುಖಂಡರಾದ ಕೆ. ಗಂಗಯ ಅಮೀನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು

ಸಭೆಯಲ್ಲಿ ಭಾಗವಹಿಸಿದ್ದ ಡಿ.ವೈ ಎಫ್ ಐ. ಮುಖಂಡ ರಮೇಶ್, ಯು.ಬಿ. ನಾರಾಯಣ ಮತ್ತು ನಾಗೇಶ್ ಅವರುಗಳು ಯುವಕರ, ಇಂದಿನ ನಿರುದ್ಯೋಗದಂತಹ ಮಹತ್ತರವಾದ ಸಮಸ್ಯೆಗಳು ಬಗೆಹರಿಯಬೇಕಾದರೆ ಯುವ ಪೀಳಿಗೆಯು ಒಂದಾಗಬೇಕೆಂದೂ ಕರೆ ನೀಡಿದರು.

ಸ್ವಾತಂತ್ರ್ಯ ಬಂದು ಇಂದಿಗೆ 40 ವರ್ಷ ಬಂದು ಹೋದರೂ ಸರ್ವರಿಗೂ ವಿದ್ಯಾಭ್ಯಾಸ ಹಾಗೂ ಉದ್ಯೋಗವನ್ನು ಕೊಡಲು ನಮ್ಮ ಸರ್ಕಾರಕ್ಕೆ ಸಾಧ್ಯವಾಗಲಿಲ್ಲೆಂದೂ ಹೇಳಿದರು.

19 ಸದಸ್ಯರಿರುವ ವಲಯ ಸಮಿತಿಯನ್ನು ರಚಿಸಲಾಯಿತು ಹಾಗೂ ಈ ವರ್ಷದ ಪದಾಧಿಕಾರಿಗಳಾಗಿ ಅಧ್ಯಕ್ಷರಾಗಿ ಹೊನ್ನಯ್ಯ ಅಮೀನ್, ಉಪಾಧ್ಯಕ್ಷರಾಗಿ ಯು ಮಹಮ್ಮದ್, ಕಾರ್ಯದರ್ಶಿಯಾಗಿ ಕೃಷ್ಣಪ್ಪ ಪೂಜಾರಿ ಜತೆ ಕಾರ್ಯದರ್ಶಿಯಾಗಿ ಮಾಧವ ಬಿ. ಹಾಗೂ ಕೋಶಾಧಿಕಾರಿಯಾಗಿ ಟಿ ಇಬ್ರಾಹಿಂ ಅವರುಗಳನ್ನು ಆರಿಸಲಾಯಿತು.

ಶಿವಮೊಗ್ಗ

ತಮ್ಮ ಬೇಡಿಕೆಗಳಿಗಾಗಿ ಕೇರಳ ರಾಜ್ಯಾದ್ಯಂತ ಯುವ ಜನತೆ ನಡೆಸುತ್ತಿರುವ ಚಳುವಳಿಯನ್ನು ಹತ್ತಿಕ್ಕಲು ಕರುಣಾಕರನ್ ಸರಕಾರ ಯುವಜನರ ಮೇಲೆ ಅತ್ಯಾಚಾರ, ದಬ್ಬಾಳಿಕೆ ನಡೆಸುತ್ತಿರುವುದನ್ನು ಖಂಡಿಸಿ ಕರುಣಾಕರನ್ ಸರಕಾರವನ್ನು ವಜಾ ಮಾಡಿ ನಿರುದ್ಯೋಗ ಭತ್ಯೆಯನ್ನು ಜ್ಯಾರಿ ಮಾಡಬೇಕೆಂದು ಒತ್ತಾಯಿಸಿ ಶಿವಮೊಗ್ಗದಲ್ಲಿ ಡಿ. ವೈ. ಎಫ್ ಐ. ಕಾರ್ಯಕರ್ತರು ಮೆರವಣಿಗೆಯಲ್ಲಿ ತಹಶೀಲದಾರರ ಕಚೇರಿಗೆ ಹೋಗಿ ಮತ ಪ್ರದರ್ಶನ ಮಾಡಿ ಮನವಿ ಸಲ್ಲಿಸಿದರು.

ಇಪ್ಪತ್ತೈದು ವರ್ಷಗಳ ಅಲಿಪ್ತ ಚಳುವಳಿ

ಕಳೆದವಾರ ಜಿಂಬಾಬ್ವೆಯ ರಾಜಧಾನಿ ಹರಾರೆಯಲ್ಲಿ ಮುಕ್ತಾಯಗೊಂಡ ಅಲಿಪ್ತ ರಾಷ್ಟ್ರಗಳ ಎಂಟನೇ ಶೃಂಗ ಸಮ್ಮೇಳನ ಹಲವಾರು ದೃಷ್ಟಿಯಲ್ಲಿ ಚಾರಿತ್ರಿಕ ಮಹತ್ವ ಪಡೆದ ಸಮ್ಮೇಳನ ಇಪ್ಪತ್ತೈದು ವರ್ಷಗಳ ಹಿಂದೆ ಯುಗೊಸ್ಲಾವಿಯದ ರಾಜಧಾನಿ ಬೆಲ್ಗ್ರೇಡ್‌ನಲ್ಲಿ ಕೇವಲ ಇಪ್ಪತ್ತೈದು ರಾಷ್ಟ್ರಗಳ ಸದಸ್ಯತನದೊಂದಿಗೆ ಪ್ರಾರಂಭವಾದ ಅಲಿಪ್ತ ರಾಷ್ಟ್ರಗಳ ಒಕ್ಕೂಟ 1986ರಲ್ಲಿ ಒಂದುನೂರಾ ಎರಡು ರಾಷ್ಟ್ರಗಳನ್ನು ಹೊಂದಿರುವ ಬೃಹತ್ ಚಳುವಳಿಯಾಗಿ ಬೆಳೆದು ಬಂದಿದೆ. ಕಳೆದ ಕಾಲು ಶತಮಾನದಲ್ಲಿ ಅಲಿಪ್ತ ಚಳುವಳಿ ಯಾವಾಗಲೂ ದೃಢವಾದ ನಿರ್ಧಾರಗಳನ್ನು ಕೈಗೊಂಡಿದೆಯೆನ್ನುವಂತಿಲ್ಲ. ಅದರ ನಿಲುವುಗಳಲ್ಲಿ ಚಾಂಚಲ್ಯ, ಗೊಂದಲಗಳೂ ಇರಲಿಲ್ಲವೆಂದಲ್ಲ, ಹಾಗಿದ್ದರೂ ಅಲಿಪ್ತ ಚಳುವಳಿ ತೃತೀಯ ಜಗತ್ತಿನ, ಹಿಂದುಳಿದ ರಾಷ್ಟ್ರಗಳು ಸ್ವಾತಂತ್ರ್ಯ ಗಳಿಸಿದ ನಂತರ ಸಾಮ್ರಾಜ್ಯಶಾಹಿ ರಾಷ್ಟ್ರಗಳು ನಡೆಸಿದ ಆರ್ಥಿಕ. ರಾಜಕೀಯ, ಸಾಂಸ್ಕೃತಿಕ ದಬ್ಬಾಳಿಕೆಯ ವಿರುದ್ಧ ಅಭಿವ್ಯಕ್ತಗೊಳಿಸಿದ ಪ್ರತಿಭಟನೆಯ ಸಂಕೇತವಾಗಿದೆ.

ಹಿನ್ನೆಲೆ

1961ರಲ್ಲಿ ಜವಾಹರಲಾಲ್ ನೆಹರು, ಗಮೆಲ್ ಅಬ್ದುಲ್ ನಾಸೆರ್ ಮತ್ತು ಜೋಸೆಫ್ ಬ್ರಾಜ್ ಟಿಟೋ ಅವರ ಪ್ರಯತ್ನಗಳ ಫಲವಾಗಿ ರೂಪುಗೊಂಡ ಅಲಿಪ್ತ ಚಳುವಳಿಯನ್ನು ಪಶ್ಚಿಮದ ಬಂಡವಾಳಶಾಹಿ ರಾಷ್ಟ್ರಗಳು ಕೆಂಗಣ್ಣಿನಿಂದಲೇ ನೋಡಿವೆ. ಬಂಡವಾಳಶಾಹಿ ಜಗತ್ತಿನಲ್ಲಿ ಬೆಳೆದು ಬಂದ ಮುಗ್ಗಟ್ಟಿನ ಫಲವಾಗಿ ವಿಶ್ವದ ಜನತೆಯನ್ನು ಅಸಹನೀಯ ಯಾತನೆಗೆ ಒಳಪಡಿಸಿದ ಎರಡು ಮಹಾಯುದ್ಧಗಳು, ಅವುಗಳಿಂದಾಗಿ ಉಂಟಾದ ಅಪಾರ ಜೀವ ಮತ್ತು ಸೊತ್ತಿನ ಹಾನಿ ಏಶಿಯಾ ಆಫ್ರಿಕಾ ಮತ್ತು ದಕ್ಷಿಣ ಅಮೇರಿಕಾದ ಅನೇಕ ರಾಷ್ಟ್ರಗಳನ್ನು ದಟ್ಟ ದಾರಿದ್ರ್ಯದಅಂಚಿಗೆ ತಳ್ಳಿದ್ದವು. ಇದಕ್ಕೆ ವಿರುದ್ಧವಾಗಿ ಬಂಡವಾಳಶಾಹಿ ಶೋಷಣೆಯಿಂದ ವಿಮೋಚನೆಗೊಂಡು ಮೊದಲಿಗೆ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯೂರೋಪಿನ ರಾಷ್ಟ್ರಗಳು ಹಾಗೂ ಚೀನಾ ಸಮಾಜವಾದಿ ವ್ಯವಸ್ಥೆಯನ್ನು ಅಂಗೀಕರಿಸಿ ಬೃಹತ್ ಶಕ್ತಿಗಳಾಗಿ ಬೆಳೆದು ಬಂದವು, ಬೆಳೆಯುಬರುತ್ತಿರುವ ಸಮಾಜವಾದಿ ಶಕ್ತಿ ಬಣ ಸಾಮ್ರಾಜ್ಯಶಾಹಿಗಳಿಗೆ ಸಹನೆಯಾಗಲಿಲ್ಲ. ಸಮಾಜವಾದಿ ವ್ಯವಸ್ಥೆಯನ್ನು ನಾಶಪಡಿಸುವ ಪ್ರಯತ್ನವನ್ನು ಸಾಮ್ರಾಜ್ಯಶಾಹಿಗಳು ಬಹಿರಂಗವಾಗಿಯೇ ನಡೆಸಿಕೊಂಡು ಬಂದವು. ಇದು ಸಮಾಜವಾದಿ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ನಡುವೆ ತೀವ್ರವಾದ ಶೀತಲ ಸಮರಕ್ಕೆ ಅವಕಾಶ ಮಾಡಿಕೊಟ್ಟಿತು. ಇಂತಹ ಸಂದರ್ಭದಲ್ಲಿ ಭಾರತವನ್ನು ಒಳಗೊಂಡಂತೆ ಹೊಸದಾಗಿ ಸ್ವತಂತ್ರ್ಯ ಪಡೆದ ತೃತೀಯ ಜಗತ್ತಿನ ಅನೇಕ ರಾಷ್ಟ್ರಗಳು ತಮ್ಮ ಆರ್ಥಿಕತೆಯನ್ನು ಬಂಡವಾಳಶಾಹಿಯ ಮಾರ್ಗದಲ್ಲಿ ಕೊಂಡೊಯ್ಯುವ ಹತಾಶ ಪ್ರಯತ್ನ ನಡೆಸುತ್ತಿದ್ದವು. ಅಂತಿಮವಾಗಿ ಈ ದೇಶಗಳ ಆಳುವವರ್ಗ ಬಂಡವಾಳಶಾಹಿ ಪದ್ಧತಿಯನ್ನು ಅಂಗೀಕರಿಸಿದ್ದ ಕಾರಣ ಅವು ಸ್ವಾಭಾವಿಕವಾಗಿಯೇ ಸಮಾಜವಾದಿ ಜಗತ್ತಿನ ಜೊತೆಗೆ ಪೂರ್ಣವಾಗಿ ತಮ್ಮನ್ನು ಗುರುತಿಸಿಕೊಳ್ಳಲು ಸಿದ್ಧವಿರಲ್ಲ. ಆದರೆ ಅದೇ ವೇಳೆಗೆ ಅವು ಸಾಮ್ರಾಜ್ಯಶಾಹಿಗಳ ಮತ್ತು ನವವಸಾಹತುವಾದಿಗಳ ಛಾಳಿಯನ್ನು ಎದುರಿಸಿ ಬದುಕಿ ಉಳಿಯುವುದು ಅಸಾಧ್ಯವಾಗಿತ್ತು, ಈ ವಾಸ್ತವಿಕತೆಯ ಅರಿವು ನೆಹರೂ ಅವರಂತಹ ಮುಂದಾಳುಗಳಿಗೆ ಇದ್ದಿರಬೇಕು. ಅಲಿಪ್ತ ರಾಷ್ಟ್ರಗಳ ಒಕ್ಕೂಟ ಸ್ಥಾಪನೆಯಾದದ್ದು ಈ ಹಿನ್ನೆಲೆಯಲ್ಲಿ.

ಬೆಲ್‌ಗ್ರೇಡಿನಿಂದ

ಅಲಿಪ್ತ ಚಳುವಳಿಯ ಸ್ಥಾಪನೆಗೆ ಸುಮಾರು ನಾಲ್ಕು ದಶಕಗಳ ಇತಿಹಾಸ ಇದೆ. 1946ರಲ್ಲಿ ಅಂದಿನ ವೈಸರಾಯ್ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾಗಿದ್ದ ಜವಹರಲಾಲ ನೆಹರೂ ಅವರು ಭಾರತ ಸ್ವತಂತ್ರ್ಯವಾದೊಡನೆ ಅದು ಅಲಿಪ್ತ ನೀತಿಯನ್ನು ಅನುಸರಿಸುವುದೆಂದು ಸಾರಿದ್ದರು. ಒಂದು ವರ್ಷದ ಬಳಿಕ ಮಾರ್ಚ್ 1947 ರಲ್ಲಿ ನೆಹರೂ ನವದೆಹಲಿಯಲ್ಲಿ ಏರ್ಪಡಿಸಿದ್ದ ಏಶಿಯಾ ಸಂಬಂಧಗಳ ಸಮ್ಮೇಳನದಲ್ಲಿ ಅಂದಿನ ಸಿಲೋನ್ ಪ್ರತಿನಿಧಿ ಎಸ್. ಡಬ್ಲ್ಯೂ. ಆರ್. ಡಿ. ಬಂಡಾರನಾಯಕೆ ಸಮಾನತೆ ಮತ್ತು ಸಾರ್ವಭೌಮತೆಯ ನೆಲೆಯಲ್ಲಿ ಏಶಿಯಾದ ಎಲ್ಲ ರಾಷ್ಟ್ರಗಳನ್ನು ಒಂದು ಒಕ್ಕೂಟದಲ್ಲಿ ಒಂದಾಗಿಸಬೇಕೆಂಬ ನಿರ್ಣಯವನ್ನು ಮಂಡಿಸಿದ್ದರು. ಇದಾದ ಬಳಿಕ 1955 ರಲ್ಲಿ ಅಲಿಪ್ತ ಚಳುವಳಿಗೆ ಇನ್ನೂ ಸ್ಪಷ್ಟವಾದ ರೂಪು ನೀಡುವ ಸಲುವಾಗಿ ಇಂಡೊನೇಶಿಯಾದ ಬಾಂಡುಂಗ್‌ನಲ್ಲಿ "ಆಫ್ರೋ-ಏಶಿಯನ್ ಸೌಹಾರ್ಧತಾ" ಸಮ್ಮೇಳನ ಏರ್ಪಡಿಸಲಾಯಿತು. 'ಆಫ್ರೋ-ಏಶಿಯನ್' ಚಳುವಳಿ ಮತ್ತು ಅಲಿಪ್ತ ಚಳುವಳಿಗಳ ನಡುವೆ ಬಿರುಕುಂಟು ಮಾಡಲು ನಡೆಸಲಾದ ಅನೇಕ ಪ್ರಯತ್ನಗಳನ್ನು ಸೋಲಿಸಿ 1956ರಲ್ಲಿ ಯುಗೋಸ್ಲಾವಿಯಾದ ಬ್ರಿಯೋನಿ ದ್ವೀಪದಲ್ಲಿ ನೆಹರೂ, ಟಿಟೋ ಮತ್ತು ನಾಸೆರ್ ಅವರು ಶೃಂಗಸಭೆ ನಡೆಸಿದರಲ್ಲದೆ ಅಲಿಪ್ತ ನೀತಿಯನ್ನು ಯಾವುದೇ ರಾಷ್ಟ್ರದ ಅಂಗೀಕೃತ ವಿದೇಶ ನೀತಿಯಾಗಿರುವುದರಿಂದ ಬದಲಾಯಿಸಿ ಅದನ್ನೊಂದು ಜಾಗತಿಕ ಚಳುವಳಿಯಾಗಿ ರೂಪಿಸುವುದರಲ್ಲಿ ಮಹತ್ವದ ಪಾತ್ರವಹಿಸಿದರು. ಐದು ವರ್ಷಗಳನಂತರಬೆಲ್ಗ್ರೇಡ್‌ನಲ್ಲಿ ಮೊದಲನೆಯ ಅಲಿಪ್ತ ಶೃಂಗ ಸಭೆ ನಡೆದು ಅಲಿಪ್ತ ಚಳುವಳಿಗೆ ಜನ್ಮ ನೀಡಿತು.

'ಅಲಿಪ್ತ ನೀತಿಯೆಂದರೆ ಅದೊಂದು ತಟಸ್ಥನೀತಿ' ಎಂಬುದಾಗಿ ಅದನ್ನು ಅಪಹಾಸ್ಯ ಮಾಡಿದ ಅಂದಿನ ಅಮೇರಿಕದ ವಿದೇಶಾಂಗ ಕಾರ್ಯದರ್ಶಿ ಜಾನ್ ಫಾಸ್ಟರ್ ಡಲ್ಲೆಸ್‌ಗೆ ನೆಹರೂ ನೀಡಿದ ಉತ್ತರ ಮಾರ್ಮಿಕವಾಗಿದೆ 'ಅಲಿಪ್ತ ನೀತಿಯೆಂದರೆ ಅದೊಂದು ತಟಸ್ಥ ನೀತಿ ಅಲ್ಲ. ತಟಸ್ಥ ನೀತಿ ನಕಾರಾತ್ಮಕವಾಗಿರುತ್ತದೆ. ಅಲಿಪ್ತ ನೀತಿ ಹಾಗಿಲ್ಲ. ಅದು ಸಕಾರಾತ್ಮಕವಾಗಿದೆ ಮತ್ತು ಅದಕ್ಕೆ

(8ನೇ ಪುಟ ನೋಡಿ)

ಆಂದೋಲನದ ಸ್ವರೂಪ - ದೌರ್ಬಲ್ಯ

ಅಲಿಪ್ತ ಆಂದೋಲನ ಒಂದು ಸಮರೂಪದ ಸಂಘಟನೆಯಲ್ಲ ಸಮಾಜವಾದೀ ದೇಶಗಳಿಂದ ಹಿಡಿದು ಸಿಂಗಪೂರ, ಪಾಕಿಸ್ತಾನ, ಸೌದಿ ಅರೇಬಿಯಾ, ಸೆನೆಗಲ್ ನಂತಹ ಸಾಮ್ರಾಜ್ಯಶಾಹಿಗಳ ಮಿತ್ರರು, ಬಾಲಬಡುಕರವರೆಗೆ ಎಲ್ಲ ರೀತಿಯವರೂ ಅದರಲ್ಲಿದ್ದಾರೆ ಸಮಾಜವಾದಿ ದೇಶಗಳು ಕೂಡಾ ಸಮಾನ ನಿಲುವು ತಳೆದಿಲ್ಲ. ಕ್ಯೂಬಾ. ವಿಯೆಟ್ನಾಂ, ಲಾವೋಸ್ ದೃಢವಾದ ಸಾಮ್ರಾಜ್ಯಶಾಹೀ-ವಿರೋಧಿ ನಿಲುವು ತಳೆದರೆ ಯುಗೊಸ್ಲಾವಿಯಾ ಕೆಲವೊಮ್ಮೆ ಸಾಮ್ರಾಜ್ಯಶಾಹೀ-ಪರ ಅಥವಾ ಸಂದಿಗ್ಧ ನಿಲುವಿನ ದೇಶಗಳನ್ನು ಬೆಂಬಲಿಸುತ್ತದೆ.

ಸಂಸದೀಯ ಪ್ರಜಾಸತ್ತೆ, ರಾಜಪ್ರಭುತ್ವ, ಮಿಲಿಟರಿ ಸರ್ವಾಧಿಕಾರ ಹೀಗೆ ಪರಸ್ಪರ ವಿರುದ್ಧವಾದ, ವಿಭಿನ್ನವಾದ ರಾಜಕೀಯ ವ್ಯವಸ್ಥೆಗಳ, ಸಾಮಾಜಿಕ-ಆರ್ಥಿಕ ಬೆಳವಣಿಗೆಯಲ್ಲೂ ಭಿನ್ನ-ಭಿನ್ನ ಘಟ್ಟಗಳಲ್ಲಿರುವ ದೇಶಗಳನ್ನು ಈ ಆಂದೋಲನದಲ್ಲಿ ಕಾಣಬಹುದು. ಪರಸ್ಪರ ಆಗಾಗ ಕಿತ್ತಾಡುವ, ದೀರ್ಘವಾದ ಯುದ್ಧದಲ್ಲಿ ತೊಡಗಿದ ದೇಶಗಳು ಇದರಲ್ಲಿವೆ.

ಐಕ್ಯತೆಯ ಪ್ರವೃತ್ತಿ

ಅಲಿಪ್ತತೆಯ ಪರಿಕಲ್ಪನೆ ರೂಪಗೊಂಡಾಗ ನವವಿಮೋಚಿತ ದೇಶಗಳ ಸ್ವಾತಂತ್ರ್ಯಕ್ಕೆ ಬೆದರಿಕೆ ಮಾಡುತ್ತಿದ್ದ ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ಈ ದೇಶಗಳ ಪ್ರಥಮ ಶತ್ರುವಾಗಿತ್ತು. ಅಗ ತಾನೇ ಮೂಡಿಬಂದಿದ್ದ ಜಾಗತಿಕ ಸಮಾಜವಾದೀ ವ್ಯವಸ್ಥೆಯ ಅಸ್ತಿತ್ವ ಈ ದೇಶಗಳು ತಮ್ಮ ಸ್ವಾತಂತ್ರ್ಯದ ಹಕ್ಕನ್ನು ಸ್ಥಾಪಿಸುವಲ್ಲಿ ನೆರವಾಯಿತು. ಈ ಪರಿಸ್ಥಿತಿ ಈಗಲೂ ಎಳ್ಳಷ್ಟು ಕೂಡಾ ಬದಲಾಗಿಲ್ಲವಾದರೂ "ಎರಡು ಸೂಪರ್ ಶಕ್ತಿ ಬಣಗಳು" ಎಂದು ಎರಡು ಭಿನ್ನ ವ್ಯವಸ್ಥೆಗಳನ್ನು ಕಣ್ಣುಮುಚ್ಚಿ ಒಂದೇ ತಕ್ಕಡಿಯಲ್ಲಿ ತೂಗುವ ಮುಖಂಡರು ಈ ಆಂದೋಲನದಲ್ಲಿ ಈಗಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೂ ವಾಸ್ತವ ಸನ್ನಿವೇಶದ ಒತ್ತಡ ಎಷ್ಟಿದೆಯೆಂದರೆ ಅಮೆರಿಕನ್ ಸಾಮ್ರಾಜ್ಯಶಾಹಿ ಅಲಿಪ್ತ ಆಂದೋಲನದ ದೌರ್ಬಲ್ಯಗಳನ್ನು ಬಳಸಿಕೊಂಡು ಅದರ ಐಕ್ಯತೆ ಮುರಿಯಲು ಎಷ್ಟೇ ಯತ್ನಿಸಿದರೂ, ರಾಷ್ಟ್ರೀಯ ವಿಮೋಚನಾ ಆಂದೋಲನಗಳ ವಿರುದ್ಧ ಸಾಮ್ರಾಜ್ಯಶಾಹಿಯ ನಾಚಿಕೆಹೀನ, ನಗ್ನ ಹಸ್ತಕ್ಷೇಪ, ಅದು ಹರಡುತ್ತಿರುವ ಪರಮಾಣು ವಿನಾಶದ ಅಪಾಯ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಹೇರುತ್ತಿರುವ ಆರ್ಥಿಕ ಸಂಕಷ್ಟಗಳಿಂದಾಗಿ ಆಂದೋಲನದ ಐಕ್ಯತೆಯನ್ನು ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ನಿಲುವನ್ನು ಉಳಿಸಿಕೊಳ್ಳಬೇಕೆಂಬ ಒಂದು ಪ್ರಬಲ ಪ್ರವೃತ್ತಿ ಕಂಡುಬರುತ್ತಿದೆ. ಸಾಮ್ರಾಜ್ಯಶಾಹಿ-ವಿರೋಧಿದೇಶಗಳು, ಹೊಸದಾಗಿ ವಿಮೋಚಿತ ದೇಶಗಳು ಪ್ರತಿಗಾಮಿ ದೇಶಗಳ ಪ್ರಯತ್ನಗಳನ್ನು ವಿಫಲಗೊಳಿಸುತ್ತಿವೆ. ಸಾಮ್ರಾಜ್ಯಶಾಹಿಗಳ ಪರವಾಗಿ ಮಾತನಾಡಲೂ ಯಾರೂ ಧೈರ್ಯ ಮಾಡುತ್ತಿಲ್ಲ. ಮಾತ್ರವಲ್ಲ, ಆಂದೋಲನದ ಹೇಳಿಕೆಗಳಲ್ಲಿ ಪರೋಕ್ಷವಾಗಿಯಾದರೂ (ಹಲವು ಬಾರಿ ನೇರವಾಗಿಯೂ) ಸಾಮ್ರಾಜ್ಯಶಾಹಿಗಳನ್ನು ಖಂಡಿಸಲಾಗುತ್ತಿದೆ.

ಜನತೆಯ ಕರ್ತವ್ಯ

ಈ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆ ಹಾಗೂ ಅಲಿಪ್ತ ಆಂದೋಲನ ಇವೆರಡರ ನಡುವಿನ ವ್ಯತ್ಯಾಸ ಗಮನಾರ್ಹ. ವಿಶ್ವಸಂಸ್ಥೆಯಲ್ಲಿ ಇತ್ತೀಚೆಗೆ ಯುದ್ಧ-ಶಾಂತಿಗೆ ಸಂಬಂಧಪಟ್ಟಂತೆ ಪ್ರಗತಿಶೀಲ ಶಕ್ತಿಗಳ ಪರವಾಗಿ ಸ್ವಾಗತಾರ್ಹ ಬದಲಾವಣೆ ಕಂಡು ಬಂದರೂ ವರ್ಗ ಪ್ರಶ್ನೆಗಳ ಬಗ್ಗೆ ಅದು ಹಲವು ಕೆಟ್ಟ ನಿರ್ಣಯಗಳನ್ನು ಕೈಗೊಂಡಿದೆ. ಯಾಕೆಂದರೆ ಅಮೆರಿಕನ್ ಸಾಮ್ರಾಜ್ಯಶಾಹಿಗಳು ತಮ್ಮ ಆರ್ಥಿಕ ನೆರವನ್ನು ಅವಲಂಬಿಸಿರುವ ದೇಶಗಳ ಮೇಲೆ ಒತ್ತಡ ತರಲು ಸಫಲರಾಗುತ್ತಾರೆ. ಆದರೆ ಅಲಿಪ್ತ ಆಂದೋಲನದಲ್ಲಿ ಹೀಗಾಗುವುದಿಲ್ಲ. ಯಾಕೆಂದರೆ ಈ ದೇಶಗಳು ತಮ್ಮೆಲ್ಲರನ್ನು ಬಾಧಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಿ ಒಂದು ಸರ್ವರಿಗೂ ಸ್ವೀಕಾರಾರ್ಹವಾಗಬಹುದಾದ ನಿರ್ಣಯಗಳಿಗೆ ಬರುತ್ತದೆ. ಇದರಿಂದಾಗಿ ಭವಿಷ್ಯದಲ್ಲಿ ಅಲಿಪ್ತ ಆಂದೋಲನ ವಿಶ್ವ ಸಂಸ್ಥೆಯ ಮೇಲೆ ಹೆಚ್ಚೆಚ್ಚು ಪ್ರಭಾವ ಬೀರುವ ಸಂಭವವಿದೆ.

ಅಲಿಪ್ತ ದೇಶಗಳು ಆರ್ಥಿಕ ವಿಷಯಗಳಲ್ಲಿ ಅಭಿವೃಧಿ ಹೊಂದಿದ ಬಂಡವಾಳಶಾಹಿ ದೇಶಗಳ ವಿರುದ್ಧ ಹಾಗೂ ತಮ್ಮೊಳಗೆ ಪರಸ್ಪರ ಸಹಕಾರದ ನಿಲುವು ತಳೆದರೂ ಕೂಡಾ ಇದರಲ್ಲೊಂದು ಮುಖ್ಯ ಕೊರತೆಯಿದೆ. ಅಲಿಪ್ತ ಆಂದೋಲನದ ಸದಸ್ಯರಲ್ಲಿ ಭಾರತವೂ ಸೇರಿದಂತೆ ಬಹಳಷ್ಟು ದೇಶಗಳ ಆಳುವ ವರ್ಗಗಳು ತಮ್ಮಲಿನ ಬಂಡವಾಳಶಾಹಿ - ಪೂರ್ವ ಅಥವ ಪಾಳೆಯಗಾರೀ - ಪೂರ್ವ ಸಂಬಂಧಗಳನ್ನು ಅಂತ್ಯಗೊಳಿಸಲು ಸಾಧ್ಯವಿಲ್ಲ. ಇದರಿಂದಾಗಿ ನಿಜವಾದ ಪ್ರಗತಿ ಸಾಧ್ಯವಾಗುತ್ತಿಲ್ಲ. ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿ ಪಾಶ್ಚಿಮಾತ್ಯ ದೇಶಗಳ "ನೆರವಿನ" ಮೇಲೆ ಹೆಚ್ಚೆಚ್ಚು ಅವಲಂಬಿಸ ಬೇಕಾಗುತ್ತದೆ. ಇದರ ಪರಿಣಾಮ ಈ ದೇಶಗಳ ವಿದೇಶಾಂಗ ನೀತಿಯ ಮೇಲೂ ಬಿದ್ದು ಅಲಿಪ್ತ ನೀತಿಯಲ್ಲಿ ಚಂಚಲತೆ ಹಾಗೂ ರಾಜಿ ಕಂಡು ಬಂದರೆ ಅದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದಲೇ ಅಲಿಪ್ತ ವಿದೇಶಾಂಗ ನೀತಿಯನ್ನು ರಕ್ಷಿಸಿಕೊಳ್ಳಬೇಕಾದರೆ ಸಂಪೂರ್ಣ ಜನತೆಯನ್ನು ಸಾಮ್ರಾಜ್ಯ ಶಾಹಿ ವಿರೋಧಿ ಹೋರಾಟದಲ್ಲಿ ತೊಡಗಿಸುವುದು ಅತ್ಯಗತ್ಯ ಎಂದು ಸಿ. ಪಿ. ಐ. (ಎಂ) ಬಾರಿ ಬಾರಿಗೂ ಹೇಳುತ್ತಾ ಬರುತ್ತಿರುವುದು.

ಗೂರ್ಖಾ ಲ್ಯಾಂಡ್ ಬೇಡಿಕೆಯನ್ನು ಎದುರಿಸಿರಿ

(1ನೇ ಪುಟದಿಂದ)

ಭಾಷೆಗೆ ಪ್ರೋತ್ಸಾಹ ನೀಡಿದೆ. ಶಾಲೆಗಳಲ್ಲಿ ಆ ಭಾಷೆ ಕಲಿಯಲಿಕ್ಕೆ ಅನುಕೂಲ ಮಾಡಿಕೊಟ್ಟಿದೆ, ಭಾರತದ ಸಂವಿದಾನದಲ್ಲಿ ನೇಪಾಲಿ ಭಾಷೆಯನ್ನು ಸೇರಿಸಬೇಕೆಂದು ಕೇಂದ್ರ ಸರಕಾರದ ಮೇಲೆ ಒತ್ತಾಯಿಸುತ್ತ ಬಂದಿದೆ. ಪ. ಬಂಗಾಲದ ಎಡರಂಗ ಸರಕಾರ ರಾಜ್ಯದ ಸರಕಾರಿ ಭಾಷೆಗಳಲ್ಲೊಂದಾಗಿ ಪರಿಗಣಿಸಿದೆ. ಅದರಂತೆಯೇ ಉತ್ತರ ಬಂಗಾಲದಲ್ಲಿ ನೇಪಾಲಿ ಭಾಷಿಕ ಪ್ರದೇಶದ ಪ್ರಾದೇಶಿಕ ಸ್ವಾಯತ್ತತೆ ಪಡೆಯಬೇಕೆಂಬ ಸೂಚನೆಗೆ ಬೆಂಬಲ ನೀಡಿದೆ. ಪಶ್ಚಿಮ ಬಂಗಾಲದಲ್ಲಿರುವ ನೇಪಾಲಿ ಜನರ ಈ ಬೇಡಿಕೆಗಳು ಈಗಾಗಲೇ ಮಂಜೂರಾಗುತ್ತಿದ್ದವು. ಆದರೆ ಕೇಂದ್ರದಲ್ಲಿರುವ ಕಾಂಗ್ರೆಸ್ ಸರಕಾರ ಈ ಸೂಚನೆಗಳನ್ನು ಮೇಲಿಂದ ಮೇಲೆ ನಿರಾಕರಿಸುತ್ತಲೇ ಬಂದಿದೆ. ಈ ಬೇಡಿಕೆಗಳಿಗೆ ಒಪ್ಪಿಗೆ ನೀಡಲು ಕೇಂದ್ರ ಸರಕಾರ ಯಾವಾಗಲೂ ನಿರಾಕರಿಸುತ್ತಲೇ ಬರುತ್ತಿದ್ದಾಗ, ಪ. ಬಂಗಾಲದಲ್ಲಿರುವ ಕಾಂಗ್ರೆಸ್ ಜನ ಗೂರ್ಖಾ ರಾಜ್ಯಕ್ಕಾಗಿ ನಡೆದಿರುವ ಚಳುವಳಿಯನ್ನು ಅಸ್ಥಿರ ಪರಿಸ್ಥಿತಿ ಉಂಟುಮಾಡುವ ಸಲುವಾಗಿ ಉಪಯೋಗಿಸುತ್ತಿದ್ದಾರೆ.

ದೇಶದ ಐಕ್ಯತೆ ಮತ್ತು ಸಮಗ್ರತೆಯ ಸಲುವಾಗಿ ಭದ್ರವಾಗಿ ಅಂಟಿಕೊಂಡಿರುವ ಚಹಾ ತೋಟದ ಕಾರ್ಮಿಕರನ್ನು ಪಿ. ಬಿ. ಅಬಿನಂದಿಸುತ್ತದೆ. ಹೆಚ್ಚಾಗಿ ಸಿ.ಐ.ಟಿ.ಯು. ಗೆ ಸೇರಿದ ಈ ಕಾರ್ಮಿಕರು ಪ್ರತ್ಯೇಕವಾದಿಗಳ ದಬ್ಬಾಳಿಕೆಯನ್ನು ಎದುರಿಸುತ್ತಿದ್ದಾರೆ. ಬೇರೆಬೇರೆ ಭಾಷೆಗಳನ್ನಾಡುವ ನೇಪಾಲಿ ಆದಿವಾಸಿ, ಬಂಗಾಲಿ ಮುಂತಾದ ಭಾಷೆಗಳನ್ನಾಡುವ ಕಾರ್ಮಿಕರು ಅವರಾಗಿದ್ದಾರೆ. ಪ್ರತ್ಯೇಕವಾದಿಗಳ ಚಳುವಳಿಯನ್ನು ಎದುರಿಸಲು ಧೈರ್ಯಹೊಂದಿದ ರೈತರು, ಬುದ್ಧಿಜೀವಿಗಳೂ, ಮಧ್ಯಮವರ್ಗದ ನೌಕರದಾರರು ಈ ಕಾರ್ಮಿಕರಿಗೆ ಬೆಂಬಲ ನೀಡುತ್ತಿದ್ದಾರೆ. ರಾಷ್ಟ್ರದ ಐಕ್ಯತೆ ಕಾಪಾಡುವ ಹೋರಾಟದಲ್ಲಿ ಈಗಾಗಲೆ ಮೂವರು ಕಾರ್ಮಿಕರು, ಸರಕಾರಿ ನೌಕರರು ಹುತಾತ್ಮರಾಗಿದ್ದಾರೆ.

ಎಲ್ಲಾ ಪಕ್ಷಗಳು. ಪ್ರಜಾಪ್ರಭುತ್ವ ಸಂಘಟನೆಗಳು ಒಗ್ಗಟ್ಟಾಗಿ, ಭಿನ್ನಕಾರಿ ಚಟುವಟಿಕೆಗಳ ವಿರುದ್ಧ ತಮ್ಮ ಎಲ್ಲಾ ಶಕ್ತಿಯನ್ನು ಪಯೋಗಿಸಿದರೆ, ಈ ಪ್ರತ್ಯೇಕವಾದಿ ಚಳುವಳಿಯನ್ನು ರಾಜಕೀಯವಾಗಿ ವಿರೋಧಿಸಬಹುದು. ಆಡಳಿತಾತ್ಮಕವಾಗಿ ಮಾತ್ರ ಈ ಚಳುವಳಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಿಲ್ಲ. ರಾಜಕೀಯ ಪ್ರಕ್ಷೋಭೆಯ ಜೊತೆಯಲ್ಲಿ ಮನದಟ್ಟಾಗುವಂಥ ಪರಿಣಾಮಕಾರಿಯಾದ ಒಲಿಸುವ ಪ್ರಚಾರ ಮಾತ್ರ ನಿಜವಾದ ಜನರಿಂದ ಈ ಪ್ರತ್ಯೇಕವಾದಿಗಳನ್ನು ಬೇರ್ಪಡಿಸಲು ಸಾಧ್ಯ.

ಮುಖ್ಯಮಂತ್ರಿ ಜ್ಯೋತಿಬಸು ಅವರು ಕರೆದ ಸಭೆಗೆ ಪ. ಬಂಗಾಲದ ಕಾಂಗ್ರೆಸನ್ನೊಳಗೊಂಡು ಎಲ್ಲಾ ರಾಜಕೀಯ ಪಕ್ಷಗಳೂಬಂದು, ಭಿನ್ನಕಾರಿ, ಐಕ್ಯತಾ ವಿರೋಧಿ, ರಾಷ್ಟ್ರ ವಿರೋಧಿ ಚಳುವಳಿಯ ವಿರುದ್ಧ ಹೋರಾಡಬೇಕೆಂದು ಒಮ್ಮತದ ಕರೆ ನೀಡಿರುವುದನ್ನು ನೋಡಿ ಪಿ. ಬಿ. ತನ್ನ ಆನಂದ ವ್ಯಕ್ತ ಮಾಡುತ್ತದೆ.

ಪ. ಬಂಗಾಲ ಮತ್ತು ಭಾರತದ ಐಕ್ಯತೆಯನ್ನು ರಕ್ಷಿಸುವ ಸಲುವಾಗಿ ವೀರತನದಿಂದ ಹೋರಾಡುತ್ತಿರುವ ಪಕ್ಷದ ಸದಸ್ಯರನ್ನು, ಪ್ರಜಾ ಪ್ರಭುತ್ವವಾದಿ ಸಾಮೂಹಿಕ ಸಂಘಟನೆಗಳನ್ನೂ ಪಿ. ಬಿ. ಅಭಿನಂದಿಸುತ್ತದೆ. ○

ಇಪ್ಪತ್ತೈದು ವರ್ಷಗಳ ಅಲಿಪ್ತ ಚಳುವಳಿ

(7ನೇ ಪುಟದಿಂದ)

ಗತಿಶೀಲತೆಯಿದೆ. ಯಾವುದೇ ರಾಷ್ಟ್ರದ ಮೇಲೆ ವಿದೇಶೀ ಆಕ್ರಮಣ ನಡೆದಲ್ಲಿ ಅಥವಾ ಯಾವುದೇ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟಾದಲ್ಲಿ ಅಲಿಪ್ತ ಚಳುವಳಿ ಅದನ್ನು ಪ್ರಬಲವಾಗಿ ವಿರೋಧಿಸುತ್ತದೆ ಎಂದು ನೆಹರೂ ಸಾರಿದರು.

ಚಾರಿತ್ರಿಕ ಹೊಣೆ

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಅಲಿಪ್ತ ಚಳುವಳಿ ಹಲವಾರು ಎಡರು ತೊಡರುಗಳನ್ನು ಎದುರಿಸಿದೆ. ಇರಾನ್ ಇರಾಕ್ ಯುದ್ಧ, ಪಶ್ಚಿಮ ಸಹಾರಾದ ಮೇಲೆ ಮೊರಾಕೋದ ಆಕ್ರಮಣ, ಭಾರತ, ಪಾಕಿಸ್ತಾನ ಮತ್ತು ಶ್ರೀಲಂಕಾಗಳ ನಡುವಿನ ಸಂಬಂಧಗಳಲ್ಲಿ ಕಾಣಿಸಿಕೊಂಡಿರುವ ವಿರಸಗಳ ಹೊರತಾಗಿಯೂ ಅಲಿಪ್ತ ಚಳುವಳಿ ಜಗತ್ತಿನಾದ್ಯಂತ ಹೆಚ್ಚು ಹೆಚ್ಚು ರಾಷ್ಟ್ರಗಳನ್ನು ಆಕರ್ಷಿಸುತ್ತಿದೆ. ಅಣು ಸಮರ ನಿಷೇಧ, ವಿಶ್ವಶಾಂತಿಯ ಪ್ರಶ್ನೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ದಬ್ಬಾಳಿಕೆ ಮತ್ತು ವರ್ಣದ್ವೇಷನೀತಿಯ ವಿರುದ್ಧ ಅಲಿಪ್ತ ಚಳುವಳಿ ಹೆಚ್ಚು ನಿಖರವಾದ ಮತ್ತು ತತ್ವ ನಿಷ್ಠವಾದ ನಿಲುವುಗಳನ್ನು ಅಂಗೀಕರಿಸುತ್ತಿರುವುದು ಹರ್ಷದಾಯಕ. ಹಿಂದುಳಿದ ರಾಷ್ಟ್ರಗಳು ಸ್ವಾವಲಂಬನೆ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ನಡೆಸುತ್ತಿರುವ ಪ್ರಯತ್ನ, ಸಾಮ್ರಾಜ್ಯಶಾಹಿ ರಾಷ್ಟ್ರಗಳು ತಮಗಿಷ್ಟವಿಲ್ಲದ ವ್ಯವಸ್ಥೆಯನ್ನು ಅಂಗೀಕರಿಸಿರುವ ನಿಕರಾಗುವ, ಅಂಗೋಲಾ ಮುಂತಾದ ರಾಷ್ಟ್ರಗಳ ಮೇಲೆ ನಡೆಸುತ್ತಿರುವ ಆಕ್ರಮಣಗಳ ಹಿನ್ನೆಲೆಯಲ್ಲಿ ಅಲಿಪ್ತ ಚಳುವಳಿ ಇನ್ನಷ್ಟು ಸ್ಪಷ್ಟವಾದ ಗೊತ್ತುಗುರಿಯನ್ನಿರಿಸಿಕೊಂಡು ಬಲಗೊಳ್ಳಬೇಕಾದುದು ಅಗತ್ಯ. ಅಲಿಪ್ತ ರಾಷ್ಟ್ರಗಳು ಸಾಮ್ರಾಜ್ಯಶಾಹಿಯ ವಿರುದ್ಧ ಇನ್ನಷ್ಟು ನಿರ್ದಿಷ್ಟವಾದ ನಿಲುವನ್ನು ಅಂಗೀಕರಿಸಬೇಕು. ವಿಶ್ವ ಶಾಂತಿಗಾಗಿ ಮತ್ತು ಅಣ್ವಸ್ತ್ರ ವಿರೋಧಿ ಚಳುವಳಿಗಳಲ್ಲಿ ಅಲಿಪ್ತ ಚಳುವಳಿ ತನ್ನ ಚಾರಿತ್ರಿಕ ಜವಾಬ್ದಾರಿಯನ್ನು ನಿಭಾಯಿಸಬೇಕಾದುದು ತೀರಾ ಅಗತ್ಯ.

ನಿರುದ್ಯೋಗಕ್ಕೆದುರು ಕೇರಳದಲ್ಲಿ ಚರಿತ್ರಾರ್ಹ ಹೋರಾಟ

(1ನೇ ಪುಟದಿಂದ)

ಕೇರಳ ರಾಜ್ಯ ಡಿ.ವೈ.ಎಫ್.ಐ. ನಿರುದ್ಯೋಗ ಭತ್ತೆ ನಿಲ್ಲಿಸಿದ್ದನ್ನು ಲೋಕ ಸೇವಾ ಆಯೋಗದ ಮೂಲಕ ನೌಕರಿ ಕೊಡದಿರುವುದನ್ನು 24 ಯಾದಿಗಳಲ್ಲಿರುವ 1 ಲಕ್ಷ 25 ಸಾವಿರ ಜನರಿಗೆ ಕೆಲಸ ನಿರಾಕರಿಸಿರುವುದನ್ನು ವಿರೋಧಿಸಿ ಈ ಮೂರು ಬೇಡಿಕೆ ಮಂಜೂರಾಗದಿದ್ದರೆ ಹೋರಾಡುವುದಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು ಮೇ ತಿಂಗಳಲ್ಲಿ ಸರ್ಕಾರ ಬೇಡಿಕೆಗಳನ್ನು ಒಪ್ಪಿಕೊಳ್ಳದ ಕಾರಣ ಜೂನ್-ಜುಲೈ ತಿಂಗಳುಗಳಲ್ಲಿ ಹಲವಾರು ಸಭೆಗಳನ್ನು ನಡೆಸಲಾಯಿತು. 4 ಲಕ್ಷ ಯುವಕರು 1424 ಕಂದಾಯ ಕಚೇರಿಗಳನ್ನು ಘೇರಾವೋ ಮಾಡಿದರು. ಜುಲೈ ಕೊನೆಯೊಳಗೆ ಸರ್ಕಾರ ಬೇಡಿಕೆಗಳಿಗೆ ಒಪ್ಪಿಕೊಳ್ಳದಿದ್ದರೆ ಅಗಸ್ಟ 1 ರಿಂದ ಹೋರಾಟ ತೀವ್ರಗೊಳಿಸುವುದಾಗಿ ಸರ್ಕಾರಕ್ಕೆ ತಿಳಿಸಲಾಗಿತ್ತು. ಏನೂ ಪ್ರತಿಫಲ ಸಿಗಲಿಲ್ಲ. ಅಗಸ್ಟ 1 ರಿಂದ ಮಂತ್ರಿಗಳು ಸರ್ಕಾರಿ ಕಾರ್ಯಕ್ರಮಕ್ಕೆ ಹೋದಲ್ಲೆಲ್ಲ ಯುವಕರು ಸಾವಿರಾರು ಸಂಖ್ಯೆಯಲ್ಲಿ ಅಲ್ಲಿ ಕೂತು ವಿರೋಧಿಸಿದರು. 1240 ಸ್ಥಳಗಳಲ್ಲಿ ಕಾರ್ಯಕ್ರಮ ನಡೆಯಿತು. 65 ಸ್ಥಳಗಳಲ್ಲಿ ಲಾಠಿ ಚಾರ್ಜ್ ಮಾಡಲಾಯಿತು. 3 ಕಡೆ ಗೋಳಿಬಾರಾಯಿತು. ಕಾಸರಗೋಡಿನ ಬಾಲಕೃಷ್ಣನ್ ಗೋಳಿಬಾರಿಗೆ ಆಹುತಿಯಾದ. ಗೋಳಿಯ ಪೆಟ್ಟಿಗಾಗಿ ಇನ್ನೂ 4 ಜನ ಆಸ್ಪತ್ರೆಯಲ್ಲಿದ್ದಾರೆ. ಒಬ್ಬ ಮಣಿಪಾಲ್‌ನಲ್ಲಿದ್ದಾನೆ. ಒಟ್ಟು 5942 ಜನರಿಗೆ ಜಖಂ ಆಗಿದೆ. 2245 ಯುವಕರಿಗೆ ಗಂಭೀರ ಪೆಟ್ಟಾಗಿದೆ. 9559 ಯುವಕರ ಮೇಲೆ ಖೋಟಾ ಖಟ್ಲೆ ಹಾಕಲಾಗಿದೆ. 2081 ಯುವಕರನ್ನು ಬಂಧಿಸಲಾಗಿದೆ. 2007 ಯುವಕರು ಇನ್ನೂ ಜೈಲಿನಲ್ಲಿದ್ದಾರೆ. ಅಖಿಲ ಭಾರತ ಡಿ. ವೈ. ಎಫ್. ಐ. ಅಧ್ಯಕ್ಷ ವಿಜಯ್‌ಕುಮಾರ್ ಅವರಿಗೆ ತೀವ್ರ ಪೆಟ್ಟು ಬಿದ್ದಿದೆ. ಮೂಗಿಗೆ ಶಸ್ತ್ರಕ್ರಿಯೆ ನಡೆದಿದೆ. 35 ದಿವಸ ಒಂದೂವರೆ ಲಕ್ಷ ಯುವಕರು ಚಳುವಳಿಯಲ್ಲಿ ಭಾಗವಹಿಸಿದ್ದರು.

ಎಲ್ಲ ಯುವಕ ಸಂಘಟನೆಯವರನ್ನು ಮಾತುಕತೆಗೆ ಕರೆಸುತ್ತೇವೆಂದು ಕರುಣಾಕರನ್ ಹೇಳಿದಾಗ ನಾವು ವಿರೋಧಿಸಿದ ಕಾರಣ ನಮ್ಮವರನ್ನಷ್ಟೇ ಕರೆಸಿ ಒಪ್ಪಂದ ಮಾಡಿಕೊಳ್ಳಲಾತೆಂದು ಹನನ್ ಮುಲ್ಲಾ ಹೇಳಿದರು. ಒಪ್ಪಂದದ ಪ್ರಕಾರ ಅರ್ಹ ನಿರುದ್ಯೋಗಿಗಳಿಗೆ ಏಪ್ರಿಲ್ ತಿಂಗಳಿಂದಲೇ ನಿರುದ್ಯೋಗ ಭತ್ಯೆ ಕೊಡಲಾಗುವುದು. 357000 ಯುವಕರಿಗೆ ಅದರ ಲಾಭ ಸಿಗುತ್ತದೆ. ಸರ್ಕಾರಿ ನೌಕರಿ ಲೋಕ ಸೇವಾ ಆಯೋಗದ ಮೂಲಕವೇ ಕೊಡಲಾಗುವುದು. ಈಗಾಗಲೇ ಪಾಸಾಗಿರುವ 24 ಯಾದಿಗಳನ್ನು 1987 ಕೊನೆಯವರೆಗೆ ಮುಂದುವರಿಸಲಾಗುವುದು. ಅದು ಸರಿಯಾಗಿ ಜಾರಿಯಾಗುವಂತೆ ಮೇಲ್ವಿಚಾರಣೆಗಾಗಿ ಜಿಲ್ಲಾ ಮಟ್ಟದ ಕಮಿಟಿಗಳನ್ನು ನೇಮಿಸಲಾಗುವುದು. ಎಸ್. ಎಸ್. ಎಲ್. ಸಿ ಯಲ್ಲಿ ಪಾಸಾದವರಿಗೆ ಪರಿಹಾರ ಒದಗಿಸುವ ಉಪಾಯವನ್ನು ಸರ್ಕಾರ ಕಂಡುಹಿಡಿಯುವುದು. ಗೋಳಿಬಾರಿನ ವಿಚಾರಣೆಗಾಗಿ ನಿವೃತ್ತ ಹೈ ಕೋರ್ಟ್ ನ್ಯಾಯಾಧೀಶರನ್ನು ನೇಮಿಸಲಾಗುವುದು.

ಕಾಂಗ್ರೆಸ್, ಸಿ. ಪಿ. ಐ. ಹಾಗೂ ರಾಘವನ್‌ಗೆ ಸಂಬಂಧಪಟ್ಟ ಯುವಕ ಸಂಘಟನೆಗಳು ಮತ್ತು ಬಂಡವಾಳಶಾಹಿ ಪತ್ರಿಕೆಗಳು ಈ ಒಪ್ಪಂದವನ್ನೂ ಚಳುವಳಿಯನ್ನೂ ಕೀಳ್ಮಟ್ಟದಲ್ಲಿ ಟೀಕಿಸುತ್ತಿವೆ. ಅದು ಸಹಜವೇ ಸರಿ. ವಾಸ್ತವಿಕವಾಗಿ ನೋಡಿದರೆ ಕಾಂಗ್ರೆಸ್ ಸಿ.ಪಿ.ಐ. ರಾಘವನ್ ಅವರಿಗೆ ಸಂಬಂಧಿತ ಯುವಕ ಸಂಘಟನೆ ಬಲು ಬಲಹೀನ. ಈ ಚಳುವಳಿಯ ನಂತರ ಅವು ನಾಮಾವಶೇಷವಾಗಿವೆ. ಅದನ್ನು ತಿಳಿದ ಬಂಡವಾಳಶಾಹಿ ಪತ್ರಿಕೆಗಳು ಚಳುವಳಿಯನ್ನು, ಒಪ್ಪಂದವನ್ನು ಟೀಕಿಸುತ್ತಿವೆ.

ಈ ಚಳುವಳಿ ಹೊಸದೇನಲ್ಲ. ದೇಶಾದ್ಯಂತವಾಗಿ ನಡೆಯುವ ಚಳುವಳಿಯ ಅಂಗ ಇದೊಂದಷ್ಟೇ ತಮಿಳುನಾಡಿನಲ್ಲಿ 25000 ಸಾವಿರ ಯುವಕರು, ಮಹಾರಾಷ್ಟ್ರದಲ್ಲಿ 15,000 ಯುವಕರು ಈಗಾಗಲೇ ಚಳುವಳಿ ಮಾಡಿ ಜೈಲು ಕಂಡಿದ್ದಾರೆ. ನಿರುದ್ಯೋಗ ಪರಿಹಾರ ಸಿಗುವ ತನಕ ಈ ಚಳುವಳಿ ನಡೆಯುತ್ತಲೇ ಇರುತ್ತದೆ. ಒಪ್ಪಂದದ ನಂತರ ತಾನು 12 ಪ್ರಚಂಡ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಿದ್ದಾಗಿಯೂ, ಬೆಂಗಳೂರು, ಮುಂಬಯಿಗಳಲ್ಲಿ ಅಲ್ಲಿಯ ಡಿ. ವೈ. ಎಫ್. ಐ. ಯುವಕರು ಕೇರಳದ ಹೋರಾಟಕ್ಕೆ ಬೆಂಬಲಿಸಿರುವುದನ್ನೂ, ದಬ್ಬಾಳಿಕೆಯನ್ನು ಖಂಡಿಸಿರುವುದನ್ನೂ ಸಭೆಯಲ್ಲಿ ಹೇಳಿದಾಗ, ಹರ್ಷೋದ್ಗಾರಗಳಿಂದ ಅದನ್ನು ಸ್ವಾಗತಿಸಲಾಯಿತೆಂದೂ, ಅದು ಯುವಕರಲ್ಲಿ ಮತ್ತಷ್ಟು ಸ್ಫೂರ್ತಿ ನೀಡಿದೆಂದೂ ಹನನ್ ಮುಲ್ಲಾ ಹೇಳಿದರು. ಸ್ವಾತಂತ್ರ್ಯದ ನಂತರ ನಡೆದ ಅತಿ ದೊಡ್ಡ ಯುವಕರ ಚಳುವಳಿ ಇದಾಗಿದೆಂದು ಮತ್ತೊಮ್ಮೆ ಉದ್ಗಾರ ತೆಗೆದು ಆತ್ಮಾನಂದ ವ್ಯಕ್ತ ಮಾಡಿದರು. ○

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N K. Upadhyaya